# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XIV 12 ಡಿಸೆಂಬರ್ 1996

### ಈ ಸಂಚಿಕೆಯಲ್ಲಿ


| | | |
|---|---|---|
| ಅಸೋಸಿಯೇಷನ್ನಿನಲ್ಲಿ ಮಕ್ಕಳ ದಿನಾಚರಣೆ | | 2 |
| ದಿ। ಆರ್. ವಿ. ಮೂರ್ತಿ ಒಂದು ನೆನಪು | • ನಾಡಿಗರ್ ಗೋವಿಂದ ರಾವ್ | 3 |
| ಧ್ಯಾನಯೋಗದ ಆವಶ್ಯಕತೆ | (ಸಂಗ್ರಹ) | 5 |
| ಇದು ನಮ್ಮ ಪ್ರಾಚೀನ ಭಾರತ | • ಎಸ್. ಆನಂದ್ ಶಾಸ್ತ್ರಿ | 6 |
| ಅಳಿಯನ ಜೊತೆ ಗೆಳೆಯ | • ಡಾ। ಜಿ. ಡಿ. ಜೋಶಿ | 8 |
| ಸಂದರ್ಶನ: ನಟ-ನಿರ್ದೇಶಕ ಶ್ರೀ ಸುಬ್ಬರಾಯ ಭಟ್ | • ರೇಖಾ | 10 |
| ಖಲೀಲ್ ಗಿಬ್ರಾನ್‌ನ 'ಮರಳು-ನೊರೆ' | (ಸಂಗ್ರಹ) | 11 |
| ಕಾರಂತ ಕಂಡ ದೇವರು | • ಗಣೇಶ್ ಶಿರಾಡಿ | 13 |
| ಸಂಮೋಹಿನಿ ಚಿಕಿತ್ಸೆ | • ಡಾ। ಉಷಾರಾವ್ | 14 |
| ಕವನ: 'ಹೆದ್ದಾರಿಯ ಮೇಲೆ' | • ಸಾ. ದಯಾ | 16 |



**The Mysore Association, Mumbai**

393, Bhaudaji Road, Matunga, Mumbai-400 019.

Tel.: 402 46 47 • Grams: "KARUNADU"

## 'ನೇಸರು' ಬಗ್ಗೆ ಬಂದ ಪತ್ರಗಳು:

ಮಕ್ಕಳ ದಿನಾಚರಣೆಯ ವಿಶೇಷಾಂಕವನ್ನು ಆಕರ್ಷಿತವಾಗಿ ತಂದ ಅರ್ಜುನ್ ಕಶ್ಯಪ್ ಮತ್ತು ಚೇತನ್ ಪ್ರಸಾದರ ಪ್ರಯತ್ನದ ಬಗ್ಗೆ ಮೆಚ್ಚಿಕೆಯ ಮಾತುಗಳು ಕೇಳಿ ಬಂದಿದೆ. 'ನೇಸರು' ವಿನ ಪರವಾಗಿ ಈ ಯುವ ಮಿತ್ರರಿಗೆ ಅಭಿನಂದನೆಗಳು.

\- ಸಂಪಾದಕರು.

ಪ್ರಸಾದ್

ಮಕ್ಕಳ ಸಂಚಿಕೆ ಚೆನ್ನಾಗಿ ಮೂಡಿ ಬಂದಿದೆ. ಅಂತೂ ಚೇತನ್ ಅರ್ಜುನ್ ಅವರನ್ನೂ ಸಂಪಾದಕರನ್ನಾಗಿ ಮಾಡಿಬಿಟ್ಟಿರಿ! ಅವರಿಗೆ ನಮ್ಮ ಶಾಭಾಸ್ !

ನಿಮ್ಮವ
ಆನಂದ ಶಾಸ್ತ್ರಿ.

Dear Editor,

Congratulations for an excellent little effort, which is your Children's Special, edited by children. An Alphabet of Success, `What is the Secret of Success?', `Value of Time', `This is Bombay', `Images from Young Minds' are all interesting features.

2\. Can I have Uncle Pai's address, so that I can meet him when I come to Bombay next?

3\. HPL's write-up on Sport has 'iniquitous' for 'ubiquitous' (Computer)!

4\. Dinesh's alphabet has `If the blind leads the blind, both shall not fall into the ditch'. Should it not be `shall not both fall into the ditch'?

After all, it was edited by children.

Yours sincerely,
G. B. Sajjan, Bijapur.

# ಮೈಸೂರ್ ಅಸೋಸಿಯೇಶನ್‌ನಲ್ಲಿ ಮಕ್ಕಳ ಕಾರ್ಯಕ್ರಮ



ಅಜ್ಜಿಯ ಪಾತ್ರದಲ್ಲಿ ಶ್ಯಾಮಲ ಮಕ್ಕಳೊಂದಿಗೆ

ಮೈಸೂರ್ ಅಸೋಸಿಯೇಶನ್ ಮುಂಬಯಿ ಸದಸ್ಯರ ಮಕ್ಕಳಿಗೆ ಕನ್ನಡ ಓದಲು ಬರೆಯಲು ಅವಕಾಶವಿಲ್ಲದಿದ್ದರೂ ಕನ್ನಡದ ಹಾಡು ಹೇಳಲು ಮತ್ತು ಕನ್ನಡದ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶವಿದ್ದೇ ಇದೆ. ಮಕ್ಕಳ ದಿನಾಚರಣೆ ಪ್ರಯುಕ್ತವಾಗಿ ನವಂಬರ್ 16ರಂದು ಮೈಸೂರ್ ಅಸೋಸಿಯೇಶನ್ ಸಭಾಗೃಹದಲ್ಲಿ ಮಕ್ಕಳ ಕಾರ್ಯಕ್ರಮ ಆಚರಿಸಲಾಗಿತ್ತು.

ಅಂದು ನಾಲ್ಕರಿಂದ ಹದಿನಾರು ವಯಸ್ಸಿನ ಸುಮಾರು ಇಪ್ಪತ್ತು ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ರಜಕ್ಕೆಂದು ಬಂದು ಮನೆಯಲ್ಲಿ ಸೇರಿದ ಮಕ್ಕಳು. ಮನೆಯಲ್ಲಿ ಅಜ್ಜಿ ಹುಷಾರಿಲ್ಲದೆ ಮಲಗಿರುವಾಗ ತಮ್ಮನ್ನು ತಾವು ಮನರಂಜಿಸುವ ಬಗ್ಗೆ ಯೋಚಿಸುವರು. ಅವರಲ್ಲಿ ಹಿರಿಯವಳೊಬ್ಬಳು ತಮಗೆ ಬರುವ ಹಾಡು ಶ್ಲೋಕ ಒಗಟುಗಳನ್ನು ಹೇಳೋಣ ಎಂದು ಸೂಚಿಸುತ್ತಾಳೆ. ಅಂತೆಯೇ ಮೊದಲು ಎಲ್ಲರೂ ಕೂಡಿ ಗಣಪತಿಯ ಪ್ರಾರ್ಥನೆ ಗೀತೆ ಹಾಗೂ ಒಂದು ಸುಗ್ಗಿಯ ಹಾಡು ಹೇಳಿದರು. ನಂತರ ಒಬ್ಬೊಬ್ಬರಾಗಿ ತಮಗೆ ಬಂದ ಶ್ಲೋಕ, ಒಗಟು, ನಗೆಹನಿ ಹಾಗೂ ಹಾಡು ಹೇಳಿದರು.

ಈ ಮಧ್ಯೆ ವಾದ್ಯಗಾನ ಹಾಗೂ ನೃತ್ಯ ಕೂಡ ಇತ್ತು. ಕೊನೆಯಲ್ಲಿ ಅಜ್ಜಿ ಮಕ್ಕಳಿಗೆ ಕಥೆ ಹೇಳದೆ, ಮಕ್ಕಳೇ ಅಜ್ಜಿಗೆ ಕಥೆಯನ್ನು ಹೇಳಿದರು. ಮಕ್ಕಳ ಪ್ರತಿಭೆಯನ್ನು ಕಂಡು ಸಂತೋಷಗೊಂಡ ಅಜ್ಜಿ ಮಕ್ಕಳಿಗೆ ಮಿಠಾಯಿ ಹಂಚಿದಳು. ರಾಮ ಭಜನೆಯೊಂದಿಗೆ ಕಾರ್ಯಕ್ರಮ ಮುಗಿಸಿದರು.

ಈ ಕಾರ್ಯಕ್ರಮದಲ್ಲಿ ದೃಶ್ಯ, ಕ್ಷಮಾ, ಋತುಪರ್ಣ, ಸ್ಕಂದ, ಶೃತಿ, ಗೌರಿ, ಪೂರ್ಣಿಮಾ, ಶೃತಿ, ಸಂಗೀತ, ಉಜ್ವಲ, ಅನುಪಮ್, ಪಂಕಜ್, ಪ್ರಿಯಾಂಕ, ಅಭಿಜಿತ್, ಪ್ರಣಯ್, ಸಿಂಧು ಮತ್ತು ಶ್ಯಾಮಲ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಪ್ರತಿಮಾ ರಾವ್ ಅವರು ನಿರ್ದೇಶಿಸಿದ್ದರು ಮತ್ತು ಇದರ ತಯಾರಿಕೆಗೆ ಭಾರತಿ ಪ್ರಸಾದ್‌ರವರು ನೆರವು ನೀಡಿದ್ದರು.



ಉಜ್ವಲ ಆಚಾರ್ಯ

# ದಿ| ಆರ್. ವಿ. ಮೂರ್ತಿ ಒಂದು ನೆನಪು

• ನಾಡಿಗರ್ ಗೋವಿಂದ ರಾವ್

ದಿವಂಗತ ಶ್ರೀ R. ವೆಂಕಟೇಶ ಮೂರ್ತಿ ಅವರು ಸತ್ಯ ಮೂರ್ತಿ, ಕರುಣಾ ಮೂರ್ತಿ. ಅವರ ಗುಣಗ್ರಮೆಗಳನ್ನು ಕೆಲವು ಮಾತುಗಳಲ್ಲಿ ಹಿಡಿದಿಡುವುದು ಅಸಾಧ್ಯ. ನೆನಪಿಗೆ ಬಂದ ಒಂದೆರಡು ವಿಷಯಗಳನ್ನು ನನ್ನೆರಡು ಬಿಡ ಮಾತುಗಳಲ್ಲಿ ತಿಳಿಸಲು ಯತ್ನಿಸುತ್ತೇನೆ.

ಇಂದು ಮುಂಬಯಿನ ವಡಾಲದಲ್ಲಿರುವ



ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿ ಶಾಲೆಯ, ಕಾಲೇಜಿನ ಮುಖ್ಯ ಸ್ಥಾಪಕರಲ್ಲೊಬ್ಬರು ಶ್ರೀ ವೆಂಕಟೇಶ ಮೂರ್ತಿ. ದಿ| R. D. ಬಾರ್ (ಘನೋದ್ಯೋಗಿ) ಅವರ ಮುಂದೆ ಮುಂಬಯಿನಲ್ಲಿ ಒಂದು ಕನ್ನಡ ಶಾಲೆಯನ್ನು ತೆರೆಯಬೇಕೆಂಬ ಸಲಹೆಯನ್ನು ಮೊದಲು ಮಂಡಿಸಿದವರು ಶ್ರೀ ಆರ್. ವಿ. ಮೂರ್ತಿ. ಶಾಲೆಯ ಇತಿಹಾಸವನ್ನು ವಿವರಿಸುವುದು ಪ್ರಸ್ತುತ ಲೇಖನದ ವಸ್ತುವಲ್ಲ. ಆ ಶಾಲೆ ಕಟ್ಟಲು ಶ್ರೀ ವೆಂಕಟೇಶ ಮೂರ್ತಿ ನಿರಂತರ ಶ್ರಮಿಸಿದರು. ತಮ್ಮ ದೊಡ್ಡ ಕಾಣಿಕೆಯನ್ನು (Donation) ಕೊಟ್ಟಿದ್ದಲ್ಲದೆ ತಮ್ಮ ಪ್ರಭಾವ ಬೀರಿ ನಾಲ್ಕು ಕಡೆಗಳಿಂದ, ಜನರಿಂದ ಹಣವನ್ನು ತಂದು ಕಟ್ಟಡ ಸಾಕಾರಗೊಳ್ಳಲು ಸಹಾಯ ಮಾಡಿದರು. ತಮ್ಮೆಲ್ಲ ಮಕ್ಕಳನ್ನು ಶಾಲೆಗೆ ಸೇರಿಸಿದರು. ತಮ್ಮ ತೀರಿ ಹೋದ ಮಗನ ಹೆಸರಿನಲ್ಲಿ ಅವರಿಟ್ಟ ``Kittu Memorial Scholarship" ವಿದ್ಯಾರ್ಥಿ ವೇತನ ಇಂದಿಗೂ ಇದೆ; ಎಂದೆಂದಿಗೂ ಇದೆ. ತಮ್ಮ ಕಾಣಿಕೆಯಲ್ಲದೆ ಕಟ್ಟಡ ಮುಗಿಯುವ ವರೆಗೆ ತಮ್ಮ ಸಂಬಳದಲ್ಲಿ ತಿಂಗಳಿಗೆ (ಐವತ್ತು) ರೂಪಾಯಿನಂತೆ (ಆ ಕಾಲದಲ್ಲಿ ಐವತ್ತು ರೂಪಾಯಿ ಸಾಕಷ್ಟು ಮೊತ್ತ) ಕೊಡುತ್ತಾ ಇದ್ದರು. ಕೆಲವು ಜನ ಶಾಲೆಯನ್ನು ``ಮೂರ್ತಿ ಸ್ಕೂಲ್" ಎಂದು ಕರೆಯುತ್ತಿದ್ದುದುಂಟು.

ಶಾಲೆಯ ನಿರ್ಮಾಣಕ್ಕೆ ಮೊಟ್ಟಮೊದಲ ದೊಡ್ಡ ದಾನಿ ದಿ| R. D. ಬಾರ್. ಕಟ್ಟಡ ದೇವ ಮಂದಿರದಂತೆ ಕಾಣ ಬೇಕೆಂಬುದು ಶ್ರೀ R. D. ಬಾರ್ ಅವರ ಇಷ್ಟ. ಕೊಳಕು ಸ್ಥಳದಲ್ಲಿ ದೇವ ಮಂದಿರದಂತೆ ಒಂದು ಸುಂದರ ಕಟ್ಟಡವನ್ನು ಎಬ್ಬಿಸುವುದು ಸಾಮಾನ್ಯದ ಮಾತೆ? ನಿಧಾನವಾಗಿ ಕಟ್ಟಡ ಏಳುತ್ತಿತ್ತು. ``Second Floor (ಎರಡನೇ ಅಂತಸ್ತು) ಆಗಿದೆ. First Floor (ಮೊದಲು ಅಂತಸ್ತು) ಕೂಡಾ ಆಗಿದೆ. ಇನ್ನು Ground Floor (ನೆಲದ ಅಂತಸ್ತು) ಆಗಬೇಕು! ಎಂದು ಆಗ ನಾನು ತಮಾಷೆ ಮಾಡಿದ್ದೆ. ಹಳೆಯ ಬ್ಯಾರಕ್ಸ್ ಶಾಲೆಯಿಂದ ಹೊಸ ಶಾಲೆಗೆ ವಿದ್ಯಾರ್ಥಿಗಳು, ಉಪಾಧ್ಯಾಯ ವೃಂದ ಮತ್ತಿತರರು ಹೋದಾಗ ನಮಗೆಲ್ಲ ಸಂತೋಷವಾಗಿತ್ತು, ಶ್ರೀ ವೆಂಕಟೇಶ ಮೂರ್ತಿಯವರ ಮುಖದ ಮೇಲೆ ಧನ್ಯತೆಯ ಭಾವ ಮೂಡಿತ್ತು, ಪ್ರಾರಂಭದಿಂದಲೂ ಅವರು ಗೌರವ ಕಾರ್ಯದರ್ಶಿ.

ಕೊಂಚ ಸ್ವಂತ ವಿಷಯ. ಸ್ವಂತ ವಿಷಯವಿಲ್ಲದೆ ಲೇಖನ ಮುಂದುವರಿಯುವುದೆಂತು? ಶ್ರೀ ಮೂರ್ತಿಯವರು ತಾವು ಇಂಗ್ಲಿಷ್‌ನಲ್ಲಿ ಬರೆದ ರೇಡಿಯೊ ಭಾಷಣ (Radio Talk), ಕನ್ನಡ ಸಂಘ ಸಂಸ್ಥೆಗಳಲ್ಲಿ ಓದಲು, ಶಾಲೆಯ `ನಂದಾದೀಪ'ಕ್ಕಾಗಿ ಬರೆದ ಲೇಖನ ಇತ್ಯಾದಿಗಳನ್ನು ಇಂಗ್ಲಿಷ್‌ನಲ್ಲಿ ಬರೆದು ಕನ್ನಡಿಸಲು ನನಗೆ ಕೊಡುತ್ತಿದ್ದುದು ಪದ್ಧತಿ. ವಿಶ್ವೇಶ್ವರಯ್ಯ ವಿಶೇಷ ಸಂಚಿಕೆ ನಂದಾದೀಪದ ಕೆಲಸ ಮುಗಿಸಿ ನಾನು ರಜೆ ತೆಗೆದುಕೊಂಡು ತುಮಕೂರಿಗೆ ಹೋದೆ. ಆಗ ತುಮಕೂರಿನಲ್ಲಿ ನನ್ನ ಕುಟುಂಬ ವರ್ಗವಿತ್ತು. ಅಂದು ತುಮಕೂರಿನಲ್ಲಿ ಸತ್ಯನಾರಾಯಣ ಪೂಜೆ ಇಟ್ಟು ಕೊಂಡಿದ್ದೆ. ಅಂದಿನ ಬೊಂಬಾಯಿನಿಂದ ಹೋದ ನನಗೆ ತುಮಕೂರಿನಲ್ಲಿ (ಬಯಲುನಾಡಿನಲ್ಲಿ) ಹೂವು, ಹಣ್ಣು, ಮತ್ತಿತರ ವಸ್ತುಗಳು ಅಗ್ಗವೆನಿಸಿದವು. ಇನ್ನೇನು ಪೂಜೆಗೆ ನಾನು, ನನ್ನ ಸೌಭಾಗ್ಯವತಿ ಕೂಡಬೇಕು. M.O. ಬಂದಿತು. ಯಾರಿಂದ? ಶ್ರೀ ವೆಂಕಟೇಶ ಮೂರ್ತಿಯವರಿಂದ. ಅವರು ಇಂಗ್ಲಿಷ್‌ನಲ್ಲಿ ಬರೆದ `ರೇಡಿಯೊ ಟಾಕ್' (Radio Talk) ಅನ್ನು ಕನ್ನಡಿಸಿ ಕೊಟ್ಟಿದ್ದೆ. ರೇಡಿಯೊ ಸ್ಟೇಷನ್‌ನವರು ಅವರಿಗೆ ಕೊಟ್ಟ ಹಣವನ್ನು, ತಮ್ಮ ಕೈಯಿಂದ M.O. ಶುಲ್ಕವನ್ನು (Money Order Commission) ಹಾಕಿ ಶ್ರೀ ಮೂರ್ತಿಯವರು ಒಟ್ಟು ಮೊತ್ತವನ್ನು ನನಗೆ ಕಳಿಸಿದ್ದರು. ಸತ್ಯನಾರಾಯಣ ಪೂಜೆ ನಾವು ಮಾಡುತ್ತಿಲ್ಲ; ಶ್ರೀ ವೆಂಕಟೇಶ ಮೂರ್ತಿ ಹಾಗೂ ಅವರ ಧರ್ಮಪತ್ನಿ ಸರೋಜಾಬಾಯಿ ಮಾಡುತ್ತಿದ್ದಾರೆ. ಪೂಜಾ ಫಲ ಅವರಿಗೆ ದಕ ತಕ್ಕದ್ದು ಎಂದು ಅಂದುಕೊಂಡೆ.

ಶ್ರೀ ಮೂರ್ತಿಯವರ ಪರಿಚಯವಿದ್ದವರು ಕಂಡು ಕೊಂಡಿದ್ದು ಅವರ ಸತ್ಯ ನಿಷ್ಠೆ. ಮತದಿಂದ ವೈಷ್ಣವರು. ತಮ್ಮ ಆಚಾರ, ವಿಚಾರ, ನಿಯಮ, ವ್ರತ, ಪೂಜೆ, ಪುರಸ್ಕಾರ ಇತ್ಯಾದಿಗಳನ್ನು ಬಿಟ್ಟವರಲ್ಲ. ಅದೆಲ್ಲ ದೇವರ

## PROGRAMME IN DECEMBER 1996

28th December 1996.
at 7-30 p.m.
**Caralic Vocal Recital by S. Shankar**
(Artiste Air Bangalore)
All are cordially invited

31st December 1996
7-30 p.m. onwards
**grand New year Get together**
**Games, Entertainment, Dinner**
Members & other Guests
Rs. 25/- each
Children below 12 years
Rs. 15/- each
Please Join & Make the Evening Memorable

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For**
**INDIAN AIR LINES, EAST WEST, MODI LUFT & JET AIRLINES**

**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 • 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 • 409 35 73
• 407 77 50

ಮನೆಯಲ್ಲಿ, ಮನೆಯಲ್ಲಿ, ಎಲ್ಲಕ್ಕಿಂತ ಹೆಚ್ಚಾಗಿ ಅವರಿಗೆ ಸತ್ಯವೇ ದೇವರು.

``ಮಣಿಯದಿರು ಮನವೊಂದು, ಸಾಧಿಸುವ ಹಠವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರ ತೆರೆದ ಎದೆಯೊಂದು
ಅಭಿಳ ಅಭಿಳ" (ವಿ.ಸೀ.)

ಎಂಬುದು ಕವಿ ವಾಣಿ. ಶ್ರೀ ಮೂರ್ತಿಯವರು ಸುಳ್ಳಿಗೆ ಸೊಪ್ಪು ಹಾಕಿದವರಲ್ಲ, ಯಾರ ಅಬ್ಬರಕ್ಕೂ ಅಂಜಿದವರಲ್ಲ, ಹಾಗೆಯೆ ``ಕುಲವೆಂಬ, ಮನವೆಂಬ, ಕೆಳೆಯೆಂಬ, ನಾಡೆಂಬ ಮಮತೆಗಳು" ಅವರ ದಾರಿಯಲಿ ಕತ್ತಲಿಡಲಿಲ್ಲ. ಆದರೆ ಸತ್ಪಾತ್ರರಿಗೆ ಮರುಕ ಪ್ರೇಮ ತುಂಬಿದ ಅವರ ಹೃದಯ ಸದಾ ತೆರೆದಿತ್ತು, ಅವರು ಕರುಣಾ ಮೂರ್ತಿ.

ಶ್ರೀ ವೆಂಕಟೇಶ ಮೂರ್ತಿಯವರ ಹಂಬಲಕ್ಕೆ ಬೆಂಬಲವಾಗಿ ಅನೇಕ ಧಡೂತಿ ವ್ಯಕ್ತಿಗಳಿದ್ದರು. ಅಂತೆಯೆ ಅವರಿಗೆ ಯಶಸ್ಸು ಸಿಕ್ಕಿತು. ಶ್ರೀ ಆರ್. ಡಿ. ಚಾರ್, ಶ್ರೀಮತಿ ವೈದೇಹಿ ಚಾರ್, ಸರ್ವಶ್ರೀ ಬಿ. ನಾರಾಯಣ ಸ್ವಾಮಿ, ಬಿ. ಎನ್. ನಾರಾಯಣ ಸ್ವಾಮಿ, ಡಾ। ಆರ್. ಎಲ್. ಎನ್. ಐಯಂಗಾರ್, ಸಿ. ಎಲ್. ಎನ್. ಐಯಂಗಾರ್, ಡಿ. ರಾಮಣ್ಣ, ಎನ್. ಸುಬ್ರಹ್ಮಣ್ಯಂ, ಬಿ. ಜಿ. ಆಚಾರ್, ಗುಂಡೂ ರಾವ್, ಪ್ರೊ। ಸುಬ್ಬರಾವ್, ಬಿ. ಎಂ. ಎಲ್. ಮೂರ್ತಿ ಇನ್ನೂ ಅನೇಕಾನೇಕ ಜನ ತನು ಮನ ಧನಗಳಿಂದ ನೆರವಾದರು. ಅನೇಕ ಆಜೀವ ಸದಸ್ಯರು, ಇತರರು ಸಹಾಯ ಹಸ್ತ ನೀಡಿದ್ದರಿಂದ ಕನ್ನಡ ಶಾಲೆ ಸಾಕಾರಗೊಂಡಿತು. ಆ ಕಾಲದಲ್ಲಿ ಅದೊಂದೇ ಬೊಂಬಾಯಿನಲ್ಲಿ ಹಗಲ ಕನ್ನಡ ಶಾಲೆ. ಅದೇ ವಡಾಲಾದಲ್ಲಿರುವ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿ ಶಾಲೆ.

ಹೌದು. ಮಂದಿರ ನಿರ್ಮಿತವಾದರೆ ಒಳಗೆ ಸರಿಯಾದ ಮೂರ್ತಿಗಳಿರಬೇಕು. ವಿದ್ಯಾರ್ಥಿ ವಿದ್ಯಾರ್ಥಿನಿಯರು ಚಿಕ್ಕ ಪುಟ್ಟ ಮೂರ್ತಿಗಳು. ಅಲ್ಲ ಅರ್ಚಕರು. ಅಧ್ಯಾಪಕ ವೃಂದ ವಿವಿಧ ದೇವರುಗಳು; ದೇವತೆಗಳು. ಇತರ ಸಿಬ್ಬಂದಿಯೂ ಮುಖ್ಯ. ಮೇಲ್ವಿಚಾರಕರಾದ ಸಮಿತಿಯ ಸದಸ್ಯರು, ಕಾರ್ಯದರ್ಶಿ, ಅಧ್ಯಕ್ಷ - ಇವರ ಪ್ರಾಮುಖ್ಯವನ್ನು ಹೇಳಲೇ ಬೇಕಾಗಿಲ್ಲ. ವಿದ್ಯಾರ್ಥಿಗಳಲ್ಲಿ ಶಿಸ್ತು ಇತ್ತು. ಅಶಿಸ್ತು ಇರಲಿಲ್ಲವೆಂದಲ್ಲ. ಊರು ಎಂದರೆ ಹೊಲಸು ಕೇರಿ ಇರುತ್ತದಲ್ಲವೆ? ಒಳ್ಳೆಯ ಅಧ್ಯಾಪಕ ವೃಂದವಿತ್ತು, ಅದರಲ್ಲೂ ಮೇಲಿನ ತರಗತಿಗಳಿಗೆ ಪಾಠ ಹೇಳಿ ಕೊಡುತ್ತಿದ್ದ ಉಪಾಧ್ಯಾಯ-ಉಪಾಧ್ಯಾಯಿನಿಯರು ನುರಿತವರಾಗಿದ್ದರು. ನಾನೆಂದೂ ಯಾರು ಹೇಗೆ ಪಾಠ ಹೇಳಿ ಕೊಡುತ್ತಾರೆಂದು ಮರೆಯಲ್ಲಿ ನಿಂತು (Eves dropping) ಕೇಳಿದವನಲ್ಲ. ರಾಮ ರಾಮ ಅದು ನನ್ನ ರಕ್ತದಲ್ಲಿ (ಇದ್ದ ಇರುವ ರಕ್ತವೂ ತೀರ ಸ್ವಲ್ಪ) ಇಲ್ಲ.

S.S.C. (ಆಗ ಹನ್ನೊಂದನೇ ಸ್ಟ್ಯಾಂಡರ್ಡ್ XI Std.) ಪರೀಕ್ಷಾ ಫಲಿತಾಂಶ ಬಹಳ ಮಟ್ಟಿಗೆ ಸಮರ್ಪಕವಾಗಿತ್ತು, ವಿದ್ಯಾರ್ಥಿಗಳು, ಕೆಲ ಅಧ್ಯಾಪಕರು ಕೊಟ್ಟ ಅಭಿಪ್ರಾಯದ ಮೇಲೆ, ಪ್ರಾಂಶುಪಾಲರು, ಪಾಠ ವೀಕ್ಷಿಸಲು ಪ್ರತಿ ವರ್ಷ ಬರುತ್ತಿದ್ದ ವಿದ್ಯಾ ಇಲಾಖೆಯ ಅಧಿಕಾರಿಗಳು ಸೂಚಿಸಿದ ಮೆಚ್ಚುಗೆಯ ದಿಕ್ಸೂಚಿಯಿಂದಾಗಿ ಈ ನಿಲುಗಡೆಗೆ ಬಂದೆ.

ಮತ್ತೆರಡಷ್ಟು ಆರ್. ವ್ಹಿ. ಮೂರ್ತಿಯವರ ವಿಚಾರ. ಶ್ರೀ ಆರ್. ವಿ. ಮೂರ್ತಿ ವಿನಯ ಮೂರ್ತಿಯೂ ಹೌದು. ಎಂದೂ ಅವರು ಅಹ್ಮತೆ, ತಾನು ಹೆಚ್ಚು ಎಂದು ತೋರಿದವರಲ್ಲ. ವಿನೀತ ಭಾವದ ಬಗ್ಗೆ ಒಬ್ಬರು ಹೇಳಿದ ಮಾತು: ``The very moment you think you got it you have lost it". ವಿನೀತ ಭಾವ ನಟನೆಯಲ್ಲ; ಅದು ನಡತೆ. ಶ್ರೀ ಮೂರ್ತಿಯವರ ನಮ್ರತೆ, ಸ್ನೇಹ ಪರತೆಯನ್ನು ಎತ್ತಿ ಹಿಡಿಯಲು ಎಷ್ಟೋ ಸಾಮತಿಗಳಿದ್ದರೂ ಒಂದೇ ಒಂದು ಸಾಮತಿಯನ್ನು ಕೊಡುತ್ತೇನೆ. ಅದೊಂದು ಸಾಬೀತು.

ಶ್ರೀ ಬಿ. ನಾರಾಯಣ ಸ್ವಾಮಿಯವರು (Legal Adviser to Mill Owners' Association) ನಿಧನರಾದಾಗ ಶ್ರೀ ಆರ್. ವಿ. ಮೂರ್ತಿಯವರು ಅವರ ಬಗ್ಗೆ ಬರೆದ ಲೇಖನ ಕಣ್ಣಿಗೆ ಒತ್ತಿಕೊಳ್ಳತಕ್ಕಂತಹುದು. ಉತ್ತಮ ಸ್ನೇಹಕ್ಕೆ ಅದು ನಿತ್ಯ ಸಾಕ್ಷಿ. ಶ್ರೀ ಬಿ. ನಾರಾಯಣ ಸ್ವಾಮಿ, ಶ್ರೀ ವೆಂಕಟೇಶ ಮೂರ್ತಿಗಳ ಹೆಗಲೆಣೆಯಾಗಿ ಶಾಲೆಗಾಗಿ ದುಡಿದವರು. ಅವರದು ಬಹುಮುಖ ವ್ಯಕ್ತಿತ್ವ. ಅವರ ಹಿರಿಮೆಯನ್ನು ಪ್ರತಿಬಿಂಬಿಸುವ ಆ ಲೇಖನ ಶಾಲೆಯ `ನಂದಾದೀಪ'ದಲ್ಲಿ ಪ್ರಕಟವಾಯಿತು. ಇನ್ನೂ ಹೆಚ್ಚಿನ ಪತ್ರಿಕೆಗಳಲ್ಲಿ ಅದು ಬೆಳಕು ಕಂಡಿದ್ದರೆ ಚೆನ್ನಾಗಿತ್ತು, ಬಲ್ಲವರೆ ಬಲ್ಲರು ಬೆಲ್ಲದ ಸವಿಯ.

ಶ್ರೀ ಆರ್. ವಿ. ಮೂರ್ತಿ ಅರ್ಥ ಶಾಸ್ತ್ರ ಬಲ್ಲವರು. ಒಳ್ಳೆಯ ಇಂಗ್ಲಿಷ್ ಅವರ ಕರಗತವಾಗಿತ್ತು, ಅದು ಅವರು ಪಡೆದು ಬಂದಿದ್ದು; ದುಡಿದು ಬಂದಿದ್ದು. ಅವರ ಮಾತಿಗಿಂತ ಅವರ ಬರವಣಿಗೆ ಚೆನ್ನ. ಅವರು ಸ್ವಸಾಮರ್ಥ್ಯದಿಂದ ಮೇಲಕ್ಕೆ ಬಂದವರು. ದಿಗ್ಗಜಗಳು, ದಿವಂಗತ ಆದ ಕುವೆಂಪು (ಶ್ರೀ ಕೆ. ವಿ. ಪುಟ್ಟಪ್ಪ), ಶ್ರೀ ತೀ. ನಂ. ಶ್ರೀಕಂಠಯ್ಯ, ಶ್ರೀ ಕೆ. ವೆಂಕಟರಾಮಪ್ಪ ಅವರ ಸಹಪಾಠಿಗಳು. `Commerce'ನ ಸಂಪಾದಕರಾದ ಅವರನ್ನು ಅನೇಕ ಸಂಘ ಸಂಸ್ಥೆಗಳು ಮುಖ್ಯ ಅತಿಥಿಯಾಗಿ ಆಹ್ವಾನಿಸುತ್ತಿದ್ದವು. ಅನೇಕ ಉದ್ಯೋಗಪತಿಗಳು (Industrialists) ಅವರ ನೆರವನ್ನು ಪಡೆಯುತ್ತಿದ್ದರು. ಕನ್ನಡ ಶಾಲೆಗೆ ವಿಶ್ವೇಶ್ವರಯ್ಯ ವಿಂಗ್ ನಿರ್ಮಿಸುವಾಗಲೂ ದುಡಿತ. ಮತ್ತೆ ಹಣದ ಅಗತ್ಯ ಅನೇಕರನ್ನು ಆಜೀವ ಸದಸ್ಯರನ್ನಾಗಿ ಮಾಡಿದರು. ತಮ್ಮ ವರ್ಚಸ್ಸಿನಿಂದ ಅನೇಕ ರೀತಿಗಳಲ್ಲಿ ಹಣ ತಂದು ವಿಶ್ವೇಶ್ವರಯ್ಯ ವಿಂಗ್ ರೂಪುಗೊಳ್ಳಲು ಅನುವಾದರು. ದಿ। ಕುಲಪತಿ ಮಾಲವ್ಯಾಜಿ Banaras Hindu University (ಕಾಶಿ ವಿಶ್ವ ವಿದ್ಯಾಲಯ) ಸ್ಥಾಪಿಸಲು ಆಗಿನ ರಾಜ ಮಹಾರಾಜರಿಂದ, ನವಾಬರಿಂದ, ಐಶ್ವರ್ಯವಂತರಿಂದ ಎಷ್ಟು ಸಾಧ್ಯವೋ ಅಷ್ಟು (Maximum) ಹಣವನ್ನು ಕಿತ್ತುತ್ತಿದ್ದರು. ಅವರನ್ನು ``Prince among beggars" ಎಂದು ಕರೆಯುತ್ತಿದ್ದರಂತೆ. ಕುಲಪತಿ ಮಾಲವ್ಯಾಜಿಯವರಂತೆ ದಿ। ಆರ್. ವಿ. ಮೂರ್ತಿಯವರು ರಾಷ್ಟ್ರೀಯ ಕನ್ನಡ ಪ್ರೌಢ ಶಾಲೆಯನ್ನು, ಜೂನಿಯರ್ ಕಾಲೇಜನ್ನು ಕಟ್ಟಲು, ಸಂಸ್ಥೆ ಮುಂದುವರಿಯಲು ನಾನಾ ಕಡೆಗಳಿಂದ ಹಣವನ್ನು ಕಿತ್ತುತ್ತಿದ್ದರು. ಅಲ್ಲಿ ಶಾಲೆ ಕಾಲೇಜುಗಳಿಗೆ ಅರ್ಥವೆ (ಹಣವೆ) ಸ್ವಾರ್ಥ, ಅದೇ ನಿಸ್ವಾರ್ಥ. ಅವರನ್ನು ``ಮಿನಿ ಮಾಲವ್ಯಾಜಿ" ಎಂದರೆ ತಪ್ಪಾಗಲಾರದು. ಗೌರವ ಕಾರ್ಯದರ್ಶಿಯಾಗಿ, ಕೊನೆ ಕೊನೆಯಲ್ಲಿ ಮೇಲಿನ ಹಂತಗಳಲ್ಲೂ ಇದ್ದು ಅವಿರತವಾಗಿ ಶ್ರಮಿಸಿದರು. ಕನ್ನಡ ಶಾಲೆ, ಕಾಲೇಜು ಅವರ Spiritual Child (ಆತ್ಮ ಶಿಶು).

ಶ್ರೀ ಮೂರ್ತಿಯವರಿಗೆ ಅವರ ಮನೆ ಮಂದಿಗೆಲ್ಲ ದಿ। ವ್ಯಾಕರಣ ತೀರ್ಥ, ವೇದಮೂರ್ತಿ ಗೋಪಾಲಾಚಾರ್ಯರೆಂದರೆ ಅಪಾರ ಗೌರವ. ವಿದ್ಯ, ವಿದ್ಯೆಯನ್ನು ಗುರುತಿಸುತ್ತದೆ. ದೊಡ್ಡತನ, ದೊಡ್ಡತನವನ್ನು ಮಾನ್ಯ ಮಾಡುತ್ತದೆ. (ಗಿಡ್ಡತನವೂ ದೊಡ್ಡತನವನ್ನು ಗೌರವಿಸಿವೆ. ಮಾನ್ಯ ಮಾಡಿದೆ. ಅದಕ್ಕೆ ನಾನು ಸಾಕ್ಷಿ). ಶ್ರೀ ಮೂರ್ತಿಯವರ ಮಕ್ಕಳು, ಅಳಿಯಂದಿರು ಅವರ ಹಿರಿಮೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಸ್ವದೇಶದಲ್ಲಿ ಪರದೇಶಗಳಲ್ಲಿ ಬೆಳಗುತ್ತಿದ್ದಾರೆ.

ನಿರ್ಗುಣಿಯಾದ ನಿರ್ದೋಷಿಯಾದ ವ್ಯಕ್ತಿ ಯಾರೂ ಇಲ್ಲವಂತೆ. ಅವರಿಗೆ ಒಮ್ಮೊಮ್ಮೆ ಕೋಪ ಬರುತ್ತಿತ್ತು, ಕೆಲವೊಮ್ಮೆ ಸರಿಯಾದ (ಪೂರ್ತಿ) ಕಾರಣವಿಲ್ಲದೆ ಕೋಪ. ಎಲ್ಲಾ ಸರಿ. ನಾನೇನು ಹೊಗಳು ಭಟ್ಟನೆ? ತೆಗಳು ಭಟ್ಟನೆ? ಈಗ ಅವರ ಗುಣಗಾನ ಮಾಡಿ ನನಗೆ ಬರುವ ಫಲವೇನು? ಇಂದಿನ ಮುಂದಿನ ಕನ್ನಡ ಪೀಳಿಗೆ ಅವರಂತೆ ಕಿಂಚಿತ್ ನಡೆದರೆ ಕನ್ನಡ ನಾಡಿಗೆ ದೇಶಕ್ಕೆ ಒಳ್ಳೆಯದಾಗುವುದು ಎಂಬುದು ಅಭೀಪ್ಸೆ. ಈಗ ಹಗಲು ಹೊತ್ತಿನಲ್ಲಿ ಪಂಜು ಹಚ್ಚಿ (Flood Light ಹಾಕಿ) ಹುಡುಕಿದರೂ ಅವರಂಥ ವ್ಯಕ್ತಿಗಳು ಸಿಕ್ಕುವುದು ವಿರಳ. ಕೊನೆಯದಾಗಿ ಶ್ರೀ ಮೂರ್ತಿಯವರನ್ನು ತಾರಾಪೀಡನ ಮಂತ್ರಿ, ಶುಕನಾಸನಿಗೆ ಹೋಲಿಸಿ ಕವಿಯ ಮಾತಿನಲ್ಲಿ ಈ ಬರವಣಿಗೆಗೆ ಪೂರ್ಣ ವಿರಾಮ ಹಾಕುತ್ತೇನೆ. ``... . ಸಕಳ ಶಾಸ್ತ್ರಾನ್ವಿತಂ ವಿಪ್ರವಂಶ ಖ್ಯಾತಂ ನೀತಿ ಪ್ರಯೋಗ ಪ್ರಭು ನಿಖಿಳ ದಯೋದಾರ ಗಾಂಭೀರ್ಯನಾ ಬಾಲ್ಯಾತಿ ಪ್ರೇಮಾರ್ದ್ರ ಚಿತ್ತಂ ನಿಶಿತ ಮತಿ ಮಹಾಸತ್ವ ವೃತ್ತಂ ತ್ರಿವರ್ಗೋಪೇತಂ ಹಾಡುಣ್ಣ ಶೀಲಂ ವರಬುಧನಿವಹ ಸ್ತೋತ್ರ ಪಾತ್ರಂ ಪ್ರಶಸ್ತಂ."

# ಧ್ಯಾನಯೋಗದ ಅವಶ್ಯಕತೆ

ಈಗಿನ ಕಾಲದಲ್ಲಿ ಜನರಿಗೆ ವ್ಯವಹಾರದ ಒತ್ತಡದಿಂದ ಮನಸ್ಸಿಗೆ ಹೆಚ್ಚಿನ ಆಘಾತವುಂಟಾಗಿದ್ದು ಧ್ಯಾನಯೋಗದ ಅವಶ್ಯಕತೆ ಕಂಡು ಬರುತ್ತಿದೆ. ಪಟ್ಟಣಗಳಲ್ಲಿಯೂ, ನಗರಗಳಲ್ಲಿಯೂ ಜೀವಿತವನ್ನೆಲ್ಲ ಕಳೆಯುತ್ತಿರುವ ನಮಗೆ ಈ ಪ್ರಪಂಚದ ವಿಷಯದಲ್ಲಿ ಸಂಕುಚಿತ ಬುದ್ಧಿಯುಂಟಾಗಿದೆಯೇ ಹೊರತು ಅದು ಅರುವಂತೆಯೇ ಅದನ್ನು ನೋಡಿ ಆನಂದಿಸುವ ಸುಯೋಗವು ಇಲ್ಲವಾಗಿದೆ. ನಮಗೆ ಕಾಣುತ್ತಿರುವ ಪ್ರಪಂಚವೆಂದರೆ ರಸ್ತೆಗಳು, ಮೋಟಾರುಗಳು, ರೈಲುಗಳು, ವಿರೋಪ್ಲೇನ್‌ಗಳು, ಅಂಗಡಿಗಳು, ಕಛೇರಿಗಳು, ಕಾಲೇಜುಗಳು, ನ್ಯಾಯಾಲಯಗಳು, ಕಾರ್ಖಾನೆಗಳು - ಇತ್ಯಾದಿಗಳು ಮತ್ತು ಸಂಗೀತ, ನಾಟಕ, ನೃತ್ಯ, ಉಪನ್ಯಾಸ, ಪುಸ್ತಕ ಭಂಡಾರ, ಕ್ರೀಡಾಂಗಣ ಮುಂತಾದವುಗಳು ಎಲ್ಲೆಲ್ಲೂ ಕಣ್ಣಿಗೆ ಬೀಳುತ್ತಿವೆ. ಮನುಷ್ಯನು ಭೌತಿಕ ವಿದ್ಯೆಯ ಬಲದಿಂದಲೂ ವ್ಯಾಪಾರ ವ್ಯವಹಾರಗಳ ಬೆಳವಣಿಗೆಯಿಂದಲೂ ಏನೇನು ಸಂಪಾದಿಸಿ ಕೊಂಡಿರುವನೋ ಅವುಗಳೆಲ್ಲಕ್ಕೂ ಪಟ್ಟಣಗಳು ತೌರುಮನೆಯೆಂಬುದೇನೋ ನಿಜ. ಆದರೆ ಒಂದು ಪದಾರ್ಥವು ಇಲ್ಲಿ ಹುಡುಕಿದರೂ ಸಿಕ್ಕುವಂತಿಲ್ಲ. `ಶಾಂತಿ' ಎಂದರೇನೆಂಬುದು ಈ ಪಟ್ಟಣಗಳಲ್ಲಿ ಯಾರಿಗೂ ಪರಿಚಿತವಾಗಿರುವದಿಲ್ಲ. ಎಲ್ಲಾ ಪದಾರ್ಥಗಳಂತೆ ಶಾಂತಿಯನ್ನೂ ಹಣವನ್ನು ಕೊಟ್ಟು ಕೊಂಡುಕೊಳ್ಳಬಹುದೆಂಬ ಭಾವನೆ ಬಹು ಜನರಿಗೆ ಇದ್ದಂತೆ ತೋರುತ್ತದೆ. ಶಾಂತಿ ಸ್ಥಾಪನೆಗಾಗಿ ಮಾಡುವ ಪ್ರಯತ್ನಗಳಿಂದ ಕೂಡ ಶಾಂತಿಭಂಗವೇ ಆಗುತ್ತಿದೆ ಬೇರೆ ಬೇರೆಯ ಅಭಿಪ್ರಾಯಗಳ ಜನರು ಬೇರೆ ಬೇರೆಯ ಪಂಗಡಗಳಾಗಿ ತಮ್ಮ ತಮ್ಮ ಪಂಗಡದ ಶಾಂತಿಯನ್ನಾದರೂ ಕಾಯ್ದುಕೊಳ್ಳಬೇಕೆಂದು ಪ್ರಯತ್ನಿಸಿದರೂ ಅದೇನು ಮಾಯೆಯೋ ಅವರಿಗೆ ಶಾಂತಿಗೆ ಬದಲು ಅಶಾಂತಿಯೇ ಲಭಿಸುತ್ತಿದೆ. ಹೀಗಾಗಿ ಅಶಾಂತಿಯ ವೇಗವೇ ಶಾಂತಿ ಪ್ರಯತ್ನಗಳಿಂದ ಮಿಗಿಲಾಗಿರುವದು ಕಂಡು ಬರುತ್ತಿದೆ. ಇಂಥ ಸಂದರ್ಭದಲ್ಲಿ ಶಾಂತಿಗಾಗಿ ಹಂಬಲಿಸುತ್ತಿರುವ ನಮಗೆ ಪ್ರಾಚೀನರಾದ ಶಾಸ್ತ್ರಕಾರರ ಉಪದೇಶಗಳಿಗೆ ಕಿವಿಗೊಡುವದು ನಿಜವಾಗಿಯೂ ಪಥ್ಯವಾದೀತು. ಶ್ರೀ ವೇದವ್ಯಾಸರು ತಿಳಿಸುವದೇನೆಂದರೆ:

ನಾಸ್ತ್ಯತ್ರ ವಿದ್ಯಾತಪಸೋಃ
ನಾಸ್ತ್ಯತೇಂದ್ರಿಯನಿಗ್ರಹಾತ್ |
ನಾಸ್ತ್ಯತ್ರ ಲೋಭಸಂತ್ಯಾಗಾತ್ ಶಾಂತಿಂ
ಪಶ್ಯಾಮಿ ತೇನಘ ||

ಎಲೈ ಧರ್ಮರಾಯನೆ, ವಿದ್ಯೆ, ತಪಸ್ಸು, ಇಂದ್ರಿಯನಿಗ್ರಹ, ಲೋಭತ್ಯಾಗ ಇವುಗಳಿಲ್ಲದೆ ನಿನಗೆ ಶಾಂತಿಯು ಎಂದಿಗೂ ಸಿಗಲಾರದು ಎಂದಿದ್ದಾರೆ. ಈ ಮಾತು ಎಲ್ಲಾ ಕಾಲಕ್ಕೂ ಅನ್ವಯಿಸುತ್ತದೆ. ನಾವು ಸರಿಯಾದ ಅಧ್ಯಾತ್ಮ, ವಿದ್ಯೆ, ಶರೀರಶ್ರಮ, ಇಂದ್ರಿಯ ಚಾಪಲ್ಯಗಳಿಂದ ಬಿಡುಗಡೆ, ದುರಾಶೆಯಿಂದ ಮುಕ್ತಿ ಇವನ್ನು ಸಂಪಾದಿಸಿ ಕೊಳ್ಳದೆ ಇರುವೆವಾದರೆ ಶಾಂತಿಯು ಯಾವ ಕಾಲಕ್ಕೂ ದೊರಕಲೇ ಅರದು.

ಇಂದ್ರಿಯಗಳ ತೃಪ್ತಿಗಾಗಿ ನಾವು ಏರ್ಪಡಿಸಿಕೊಂಡಿರುವ ಸಾಧನಗಳೆಲ್ಲವೂ ಸ್ವಲ್ಪ ಕಾಲ ಸುಖವನ್ನುಂಟು ಮಾಡಿದರೂ ಅವು ಅನಿಷ್ಟವೇ ಆಗಿದ್ದು ಪರಿಣಾಮದಲ್ಲಿ ದುಃಖವನ್ನೇ ಉಂಟು ಮಾಡುವವು. ಇಂದ್ರಿಯಭೋಗಗಳಿಂದಾಗುವ ಸುಖವು ಸುಖವಲ್ಲವಾದರೆ ನಿಜವಾದ ಸುಖವು ಯಾವದು? ಅದು ಹೇಗೆ ದೊರೆಯುವದು? ಎಂಬ ಪ್ರಶ್ನೆಗೆ ಗೀತೆಯಲ್ಲಿ ಕೊಟ್ಟಿರುವ ಉತ್ತರವೇನೆಂದರೆ:

``ಸುಖಮಾತ್ಯಂತಿಕಂ ಯತ್ತದ್ ಬುದ್ಧಿಗ್ರಾಹ್ಯಮತೀಂದ್ರಿಯಮ್''

``ಅತ್ಯಂತ ಹೆಚ್ಚಿನ ಸುಖವೆಂಬುದು ಇಂದ್ರಿಯಗಳಿಗೆ ನಿಲುಕದೆ ಇರುವದು. ಅದು ಬುದ್ಧಿಗೆ ಮಾತ್ರ ಎಟುಕುವಂಥದ್ದಾಗಿರುವದು'' ಹೀಗಿರುವದರಿಂದ ಇಂದ್ರಿಯಗಳಿಗೆ ದೊರಕುವ ಸುಖವೂ ದುಃಖವೇ - ಎಂದು ತಿಳಿದವನು ಮಾತ್ರ ಈ ಬುದ್ಧಿಗ್ರಾಹ್ಯವಾದ ಸುಖವನ್ನು ಪಡೆಯಲು ಪ್ರಯತ್ನ ಪಡುತ್ತಾನೆ. ಅಂಥವನಿಗಾಗಿಯೇ ಭಗವಂತನು ಯೋಗವನ್ನು ಉಪದೇಶ ಮಾಡಿರುತ್ತಾನೆ ಅದೇ ಧ್ಯಾನಯೋಗವು. ಇದರ ಅವಶ್ಯಕತೆಯು ಅತ್ಯಂತ ಸುಖವನ್ನು ಬಯಸುವವರಿಗೆಲ್ಲ ಇದ್ದೇ ಇರುತ್ತದೆ.

ಆದರೆ ಈ ಧ್ಯಾನಯೋಗವನ್ನು ತಾತ್ಕಾಲಿಕವಾಗಿ ಕುತೂಹಲಕ್ಕಾಗಿ ಮಾಡಿದರೆ ಸಿದ್ಧಿಯಾಗುವದಿಲ್ಲ. ಮತ್ತು ಮನಸ್ಸು ಅತ್ಯಂತ ಚಂಚಲವಾದ್ದರಿಂದ ಇದನ್ನು ಸಾಧಿಸುವದೂ ಕಷ್ಟಸಾಧ್ಯವೇ ಸರಿ. ಭಗವಂತನೂ ಇದನ್ನು ಒಪ್ಪಿಕೊಂಡು ಅಭ್ಯಾಸ, ವೈರಾಗ್ಯಗಳ ಮೂಲಕವೇ ಇದನ್ನು ಸಾಧಿಸಬೇಕೆಂದು ತಿಳಿಸಿದ್ದಾನೆ. ಆದ್ದರಿಂದ ಸಾಧಕನು ಮೊದಲು ಹೊರಗಿನ ಇಂದ್ರಿಯ ವ್ಯಾಪಾರಗಳನ್ನೆಲ್ಲ ಕಡಿಮೆ ಮಾಡಿಕೊಳ್ಳಬೇಕು. ಆದರೆ `ಅಯ್ಯೋ, ನನಗೆ ಐಹಿಕ ಸಾಮಗ್ರಿಗಳು ಕಡಿಮೆಯಾದರೆ ಏನು ಗತಿ? ಹೊರಗೆ ಒಂದಿಷ್ಟಾದರೂ ಸುಖವಿದೆ. ಅದನ್ನು ಬಿಟ್ಟು ಒಳಗೆ ಯೋಗದಿಂದ ಹೆಚ್ಚಿನ ಸುಖವನ್ನು ಪಡೆಯುವೆನೆಂದು ಹೊರಟು ಅಲ್ಲೇನೂ ಇಲ್ಲದಿದ್ದರೆ, ಅಥವಾ ಇದ್ದರೂ ನನಗೆ ಸಿಗದೆ ಹೋದರೆ ಏನು ಗತಿ? ಎಂದು ಯೋಚಿಸುತ್ತಾ ಕುಳಿತರೆ ಏನೂ ಪ್ರಯೋಜನವಾಗಲಾರದು. ಇದು ಸಾಧಕನ ಲಕ್ಷಣವೇ ಅಲ್ಲ. ಆದ್ದರಿಂದ ಭಗವಂತನ ಮೇಲೆಯೇ ಭಾರವನ್ನು ಹಾಕಿ ದೃಢಸಂಕಲ್ಪವನ್ನು ಕೈಗೊಂಡು ಯೋಗವನ್ನು ಅಭ್ಯಾಸ ಮಾಡಿ ಮನಃಶಾಂತಿಯನ್ನು ಸಂಪಾದಿಸಿಯೇ ತೀರುವೆನು - ಕೆಲಸವು ಕೈಗೂಡುವವರೆಗೂ ಬಿಡುವದಿಲ್ಲ - ಎಂಬ ದೃಢ ನಿಶ್ಚಯದಿಂದಲೇ ಹೊರಡಬೇಕು. ದರ್ಭೆಯ ತುದಿಯಿಂದ ಒಂದೊಂದು ತೊಟ್ಟು ನೀರನ್ನು ಎತ್ತಿ ಹಾಕಿ ಸಮುದ್ರವನ್ನೆಲ್ಲ ಒಣಗಿಸಿ ಬಿಡುವೆನೆನ್ನುವವನಿಗೆ ಎಷ್ಟು ಮನೋದಾರ್ಢ್ಯವು ಬೇಕಾಗುವದೋ ಅಷ್ಟೇ ದಾರ್ಢ್ಯದಿಂದ ಬೇಸರಿಕೆಯಿಲ್ಲದೆ ಅಭ್ಯಾಸ ಮಾಡಬೇಕು. ಹೀಗೆ ಪ್ರಯತ್ನ ಪಡುವವನಿಗೆ ಭಗವಂತನ ಬೆಂಬಲವೂ ದೊರಕುವದು. ಆದ್ದರಿಂದಲೇ ಭಗವಂತನು `ನ ಮೇ ಭಕ್ತಃ ಪ್ರಣಶ್ಯತಿ' ನನ್ನ ಭಕ್ತನು ಎಂದಿಗೂ ಹಾಳಾಗುವದಿಲ್ಲ - ಎಂಬ ಪ್ರತಿಜ್ಞಾ ವಚನವನ್ನು ನೀಡಿದ್ದಾನೆ. ಆದ್ದರಿಂದ ಎಲ್ಲರೂ ಧ್ಯಾನಯೋಗಕ್ಕೆ ಸಿದ್ಧರಾಗೋಣ.

- (ಭಗವದ್ಗೀತಾರ್ಥಸರ್ವಸ್ವ - ಎಂಬ ಗ್ರಂಥದಿಂದ)

## MATRIMONIALS

Matrimonial alliance invited for a Kannada speaking Madhwa Brahmin girl, age 26 years, height 155 cms. Harishcha Gotra, Post-Graduate, employed with LIC of India at Vellore. Daughter of retired Assistant Director of Industries and Commerce of Tamil Nadu. Contact Telephone No. 493 51 96, and you may write to Box No. 122.

***

Matrimonial alliance invited for a Kannada speaking Hoysala Brahmin girl, age 22 years, 5'-2". Kashyap Gothra. Commerce graduate with Diploma in Early Childhood Care & Education from Bombay University. Working in J. K. School, Thane (Raymonds). Boy should not be NRI, Doctor, Single child. Should be religious minded with hygienic habits. Working in Bombay preferably in Thane area. May write to Box No. 121.

# ಇದು ನಮ್ಮ ಪ್ರಾಚೀನ ಭಾರತ

● ಎಸ್. ಆನಂದಶಾಸ್ತ್ರಿ
ಮೈಸೂರು

**ಶ್ರೀ ಆನಂದ ಶಾಸ್ತ್ರಿಯವರು ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾದಲ್ಲಿ ಡೆಪ್ಯುಟಿ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಆರ್ಕಿಯಾಲಜಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಇವರು ದೆಹಲಿಯಲ್ಲಿರುವ ನ್ಯಾಷನಲ್ ಮ್ಯೂಸಿಯಂನಲ್ಲಿ ಆರ್ಕಿಯಾಲಜಿಯ ಬಗ್ಗೆ ವಿಶೇಷ ಅಧ್ಯಯನ ಮಾಡಿದ್ದಾರೆ ಮತ್ತು ಅನೇಕ excarations ನಲ್ಲಿ ಭಾಗವಹಿಸಿದ್ದಾರೆ. ಇವರು ನೇಸರುವಿಗಾಗಿ ಬರೆದುಕೊಟ್ಟ 'ಇದು ನಮ್ಮ ಪ್ರಾಚೀನ ಭಾರತ' ಲೇಖನ ಮಾಲಿಕೆಯ ಮೊದಲ ಕಂತು**

ನಮ್ಮ ಮನೆ ಅಥವಾ ಹೌಸಿಂಗ್ ಸೊಸೈಟಿಗಳಲ್ಲಿ ನೇಪಾಲೀ ಗೂರ್ಖರು ಕಾವಲು ಕಾಯುತ್ತಿದ್ದರೆ ಅದು ಈಗ ನಮಗೆ ಒಂದು ಸಾಮಾನ್ಯ ದೃಶ್ಯ. ಆದರೆ ಕಟ್ಟುಮಸ್ತಾದ ಗ್ರೀಕ್ ರೋಮನ್ (ಯವನ) ಆಳುಗಳು ಅದೇ ರೀತಿ ನಮ್ಮ ಮನೆಗಳ ಮುಂದೆ ಗಸ್ತು ಹೊಡೆಯುತ್ತಿದ್ದರೆ ಅದು ಒಂದು ಅಪೂರ್ವ ದೃಶ್ಯ. ಒಂದು ಕಾಲದಲ್ಲಿ ಅದೂ ಇತ್ತು, ಈ ದೇಶದಲ್ಲಿ 1700 ವರ್ಷಗಳ ಹಿಂದೆ!

ತಮಿಳರು ಹೆಮ್ಮೆಯಿಂದ ಹೇಳಿಕೊಳ್ಳುವ ಸಮುದ್ರ ತೀರದ ಪಟ್ಟಣ ಪೂಂಪುಹಾರ್ (ಕಾವೇರಿ ಪಟ್ಟಿಣಮ್) ರೋಮನ್ ಸಾಮ್ರಾಜ್ಯದೊಡನೆ ಸಮುದ್ರ ವ್ಯಾಪಾರದ ಫಲವಾಗಿ ಕುಬೇರ ನಗರಿಯಾಗಿತ್ತು. ತಮಿಳು ಸಂಗಮ್ ಸಾಹಿತ್ಯದ ಶಿಲಪ್ಪದಿಕಾರಮ್, ಪತ್ತುಪಾಟ್ಟು ಇತ್ಯಾದಿ ಗ್ರಂಥಗಳಲ್ಲಿ ಅದರ ಬಗ್ಗೆ ರಂಜಿತ ವರ್ಣನೆ ಇದೆ. ಕತ್ತಿ, ಗುರಾಣಿ, ಹೊರಗೆ ಕಾಣದಂತೆ ಅಂಗಿಯ ಒಳಗೆ ಮುಚ್ಚಿಟ್ಟ ಚಾವಟಿ, ಇತ್ಯಾದಿಗಳಿಂದ ಸುಸಜ್ಜಿತರಾದ, ಬಿಗಿ ಅಂಗಿ ಹಾಕಿದ್ದರಿಂದ ತುಂಬಿ ಹೊರ ಚೆಲ್ಲುವ ಮೈಕಟ್ಟಿನ, ಭಯಂಕರ ಮುಖಮುದ್ರೆಯ, ಹೆಚ್ಚಿಗೆ ಕೈಸನ್ನೆಯಿಂದಲೇ ವ್ಯವಹಾರ ನಡೆಸುತ್ತಿದ್ದ ಆ ಜನ, ದೀಪಗಳಿಂದ ಜಗಮಗಿಸುತ್ತಿದ್ದ ಐಶ್ವರ್ಯವಂತರ ಮನೆಗಳ ಕಾವಲು ಕಾಯುತ್ತಿದ್ದರು. ಆ ಪಟ್ಟಣದ ಅರಣ್ಮ ದ್ವಾರವನ್ನು ಕಾಯಲು ಅವರನ್ನೇ ನೇಮಿಸುತ್ತಿದ್ದರು. ಅವರು ಅರ್ಥ ಸಾಧನೆಯ ಹಂಬಲು ತುಂಬಿ ಕೊಂಡು ತಮ್ಮ ದೇಶದಿಂದ ಬಂದ ಸಾಹಸಿ ಅಲೆಮಾರಿಗಳೋ, ವ್ಯಾಪಾರದಲ್ಲಿ ಸೋತ ಜನವೋ ಅಥವಾ ವ್ಯಾಪಾರಕ್ಕಾಗಿ ಬಂದ ಯವನರು ತಮಗಾಗಿ ಕರೆತಂದ ಸ್ವಜನರೋ, ಅಂತೂ ಅವರು ಇಲ್ಲಿಗೆ ಬಂದು ನಮ್ಮ ಭರತ ಖಂಡದ ಈ ಜನರಾಶಿಯಲ್ಲಿ ಸೇರಿ ಹೋದರು.

ಈಗಂತೂ ಯಾವ ಸಮಾರಂಭದ ಉದ್ಘಾಟನೆಯಾಗಲೀ ಮುಖ್ಯ ಅತಿಥಿಗಳು ದೀಪವನ್ನು ಹ(ಹೊ)ತ್ತಿಸುವುದರಿಂದಲೇ ಶುರುವಾಗಬೇಕು. ಅದೂ ಹಂಸದಿಂದ ಅಲಂಕೃತವಾದ, ಬತ್ತಿಗಾಗಿ 6-7 ನಾಲಿಗೆ ಇರುವ ಎತ್ತರವಾದ ಹಿತ್ತಾಳೆ ಅಥವಾ ಕಂಚಿನ ಕಂಬವೇ ಆಗಬೇಕು. ಆಧುನಿಕ ಯುಗದಲ್ಲಿ 30-40 ವರ್ಷಗಳವರೆಗೂ ಪಾಶ್ಚಾತ್ಯರಂತೆ ಟೇಪು ಕತ್ತರಿಸುವುದರಲ್ಲೇ ನಮ್ಮ ಉದ್ಘಾಟನೆ ಮುಗಿಯುತ್ತಿತ್ತು. ಈ ರೀತಿಯ ಕಂಬವು ಉತ್ತರ ಭಾರತದಲ್ಲಿ ಇಲ್ಲದಿದ್ದರೂ ದಕ್ಷಿಣದಲ್ಲಂತೂ ಶತಮಾನಗಳಿಂದಲೇ ಇತ್ತು. ತಮಿಳು ನಾಡಿನಲ್ಲಿ ಮುಖ್ಯವಾಗಿ ತಂಜಾವೂರಿನಲ್ಲಿ ತಯಾರಾಗುವ ಈ ರೀತಿಯ ದೀಪದ ಕಂಬ ಅಥವಾ ತೂಗು ದೀಪದ ಮೇಲೆ ಹಂಸದ ಪ್ರತಿಕೃತಿ ಇವತ್ತಿಗೂ ಇರುತ್ತದೆ. ಸೋಜಿಗವೆಂದರೆ ಹಂಸದ ಈ ತರಹದ ಕಂಬ ಕೇರಳದಲ್ಲಿ ಅಷ್ಟು ಪ್ರಚಾರದಲ್ಲಿ ಇಲ್ಲ.

ಸ್ವಾತಂತ್ರ್ಯ ಬಂದ ನಂತರ ಪ್ರಾಯಶಃ ನಮಗೆ ನಮ್ಮ ರೀತಿ ನೀತಿಗಳನ್ನು ವಿವೇಚಿಸುವ ಬುದ್ಧಿ, ವಿವೇಕ ಮತ್ತು ರಾಷ್ಟ್ರೀಯತೆಯ ಹೆಮ್ಮೆ ಬಂದು (ಐಡೆಂಟಿಟೀ ಕ್ರೈಸಿಸ್ ಅಂತಾರಲ್ಲ ಅದು). ಭರತ ನಾಟ್ಯ, ಯಕ್ಷಗಾನಗಳಿಗೆ ಪುನರುಜ್ಜೀವ ತಂದಾಗಿನಿಂದ ಈ ದೀಪದ ಕಂಬಕ್ಕೆ ಬೆಲೆ ಬಂತು (ದಾಸಯ್ಯನ ಗರುಡಗಂಬವೆಂದು ಕುಚೋದ್ಯ ಮಾಡುವವರಿಲ್ಲಲ್ಲ).

ಆದರೆ ಆಗ ಆ ಸುಂದರ ದೀಪಗಳ ಕರ್ತೃಗಳು ಯಾರು?

ಲೋಹದ ಕೆಲಸದಲ್ಲಿ ಪರಿಣಿತರಾದ ಯವನ ಕಂಚುಗಾರರು!

ತಮಿಳಿನ ಸಂಗಮ್ ಸಾಹಿತ್ಯವೆಂದು ಕರೆಸಿ ಕೊಳ್ಳುವ ಪುರನಾನೂರು (ಕ್ರಿ.ಶ. 60) ಮತ್ತು ಪತ್ತುಪಾಟ್ಟು (ಕ್ರಿ.ಶ. 150)ವಿನಿಂದ ಹಿಡಿದು ಪ್ರಖ್ಯಾತವಾದ ಶಿಲಪ್ಪದಿಕಾರಮ್ (ಕ್ರಿ.ಶ. 310) ಮತ್ತು ಮಣಿಮೇಖಲೈ (ಕ್ರಿ.ಶ. 400) ಗ್ರಂಥಗಳಲ್ಲಿ ಆ ಕಾಲದ ಜನಜೀವನ ಮತ್ತು ವ್ಯಾಪಾರದ ಬಗ್ಗೆ ಪುರಾವೆ ಮತ್ತು ವಿವರಣೆ ಸಿಗುತ್ತವೆಂದು ನಮ್ಮ ಮಿತ್ರ ಪುರಾತತ್ವ ವಿದ್ವಾಂಸ ಶ್ರೀ ಕೆ. ಎಸ್. ರಾಮಚಂದ್ರನ್ ಹೇಳುತ್ತಾರೆ.

ಅದೇ ರೀತಿ ಪತ್ತುಪಾಟ್ಟುವಿನಲ್ಲಿ ದೀಪದೇವಿಯ ವ್ಯಾಖ್ಯೆ ಬರುತ್ತದೆ. ತನ್ನ ಕೈಗಳ ಅಂಜಲಿಯಲ್ಲಿ ದೀಪವೊಂದನ್ನು ಹಿಡಿದು ನಿಂತ ಸುಂದರ ಸ್ತ್ರೀಯೊಬ್ಬಳ ವಿಗ್ರಹ, ದೀಪದೇವಿ. ಅದರ ಕಲ್ಪನೆ ಬರದಿದ್ದರೆ ದೂರದರ್ಶನದ ``ಸುರಭಿ''ಯನ್ನು ನೋಡಿ. ಶ್ರೀಮತಿ ರೇಣುಕಾ ಶಹಾಣೆ ಮತ್ತು ಶ್ರೀ ಸಿದ್ಧಾರ್ಥ ಕಕ್ ಮಧ್ಯೆ ಹಿಂಬದಿಯಲ್ಲಿ ದೀಪದೇವಿಯ ವಿಗ್ರಹವಿರುತ್ತದೆ. ನಮಗೆ ಅದು ಯವನರ ಕೊಡುಗೆ. ಪ್ರಾಚೀನ ಭಾರತದಲ್ಲಿ ಅದಕ್ಕೆ ಯವನದೀಪವೆಂದೇ ಹೆಸರಿತ್ತು.

ಅಡಕು ಪಾತ್ರೆಗಳಂತೆ ಕಥೆಯೊಳಗೆ ಕಥೆ ತುಂಬಿ ಮನಸ್ಸನ್ನು ಆಕರ್ಷಿಸಿ ಕಥಾಮೃತವೆನಿಸಿಕೊಂಡ ಕಥಾ ಸರಿತ್ ಸಾಗರವಾಗಲೀ ಅದರ ಮೂಲ ಗುಣಾಢ್ಯನ ಬೃಹತ್ಕಥೆಯಾಗಲೀ ಅಥವಾ ಅದರ ತಮಿಳು ರೂಪ, ಮಹಾಕಾವ್ಯ ಪೆರುಂಗದೈ (ದೊಡ್ಡ ಕಥೆ)ಯಾಗಲೀ ಯವನ ದೀಪ ದೇವಿ ಎಷ್ಟು ಜನಪ್ರಿಯವಾಗಿತ್ತೆನ್ನುವುದಕ್ಕೆ ಸಾಕ್ಷಿ. ನಮ್ಮ ಸಂಸ್ಕೃತಿ ಇವತ್ತು ನೆನ್ನೆಯದಲ್ಲ, ಶತಮಾನಗಳಷ್ಟು ಪ್ರಾಚೀನವಾದದ್ದು ಅಂತ ಹೆಮ್ಮೆ ಪಡಬಹುದಲ್ಲವೆ?

ಮಣಿಮೇಖಲೈ ಕಾವ್ಯಗ್ರಂಥ ಯವನ ಕಾರ್ಮಿಕರನ್ನು ಮೆಚ್ಚಿ ಬರೆದಿದೆ. ಮಗಧ (ದಕ್ಷಿಣ ಬಿಹಾರ್) ಮತ್ತು ಮಹಾರಾಷ್ಟ್ರದ ಕಾರ್ಮಿಕರು, ಅವಂತಿಯ (ಈಗಿನ ಮಧ್ಯ ಪ್ರದೇಶದ ಭಾಗ) ಮತ್ತು ಯವನರ ಲೋಹಕಾರರು ಮತ್ತು ಶಿಲ್ಪಿಗಳು ಸಹಕರ್ಮಿಗಳಾಗಿ ನಿಂತು ತಮಿಳರು ಅತಿ ಹೆಮ್ಮೆಯಿಂದ ಹೇಳಿಕೊಳ್ಳುವ ಪೂಂಪುಹಾರ್‌ನಂತಹ ಸುಂದರ ನಗರಿಯನ್ನು ನಿರ್ಮಿಸಿದರು. ಆ ನಗರದ ಭಾಗವೊಂದರಲ್ಲೇ ಸಮುದ್ರ ತೀರದಲ್ಲಿ ಅನುಕೂಲಸ್ಥ ಯವನರ ಕಾಲೋನಿ `ಯವನಚ್ಚೇರಿ'(ಕೇರಿ) ಇತ್ತೆಂದು ಆ ಗ್ರಂಥ ಹೇಳುತ್ತದೆ.

ಯವನ ಚಿನಿವಾರರು ಬಳೆ, ಕಡಗಗಳು ಮತ್ತು ಕರ್ಣಕುಂಡಲ ಇತ್ಯಾದಿ ಆಭರಣಗಳನ್ನು ಮಾಡುವುದರಲ್ಲಿ ತಮ್ಮ ಚತುರತೆಯನ್ನು ತೋರಿಸುತ್ತಿದ್ದರು. ಒಟ್ಟಿನಲ್ಲಿ ಅವು `ಯವನ ಮಂಜಿಕೆ' ಅಂತಲೇ ಪ್ರಸಿದ್ಧವಾಗಿದ್ದವು. ಅವರು ತಯಾರಿಸುತ್ತಿದ್ದ ಅವರದೇ ಸಂಗೀತ ವಾದ್ಯವಾದ ಹಾರ್ಪ್ (ಬೆರಳುಗಳಿಂದ ನುಡಿಸುವ ಕಮಾನಿನಂತಹ ಬಹು-ತಂತಿ ವಾದ್ಯ) ನಮ್ಮವರಿಗೆ ಪ್ರಿಯವಾಗಿತ್ತು. ಈ ಹಾರ್ಪಿನ ನಮೂನೆ ನಮ್ಮ ಉತ್ತರ ದೇಶದ ದೇವಸ್ಥಾನಗಳ ಶಿಲ್ಪಗಳಲ್ಲಿ 10-12ನೇ ಶತಮಾನಗಳವರೆಗೂ ಕಾಣಿಸಿಕೊಳ್ಳುತ್ತದೆ. ಅದರ ನಂತರದ ನಮಗೆ ಈಗ ಅದರ ಅರಿವೂ ಇಲ್ಲ. ಆಭರಣಗಳಲ್ಲದೆ ಆ ಕುಶಲ ಕರ್ಮಿಗಳಿಂದ ನಾವು ಸುಂದರವಾದ ಮಂಜೂಷಗಳು (ಕ್ಯಾಸ್ಕೆಟ್‌ಗಳು) ಮತ್ತು ಪೆಟಾರಿಗಳನ್ನು ಮಾಡಿಸಿ ಕೊಳ್ಳುತ್ತಿದ್ದವು. ಗುಜರಾತಿನ ಕಚ್‌ನಲ್ಲಿ ಇವತ್ತಿಗೂ ಇದು ಒಂದು ಜೀವಂತ ಕಲೆ.

ಆಗ ಉಚ್ಛ್ರಾಯ ಸ್ಥಿತಿಯಲ್ಲಿದ್ದ ರೋಮ್ ಸಾಮ್ರಾಜ್ಯದೊಡನೆ ನಮ್ಮ ವ್ಯಾಪಾರ 300-400 ವರ್ಷ ಸತತವಾಗಿ ನಡೆಯಿತು.

ಅವರು ನಮ್ಮಿಂದ ಒಯ್ಯುತ್ತಿದ್ದುದಾದರೂ ಏನು?

ರೇಷ್ಮೆ ಬಟ್ಟೆ (ಚೀನಾಂಬರ), ನವಿರಾದ

ಹತ್ತಿಬಟ್ಟೆಗಳು, ಬಣ್ಣದ ಚಿತ್ರ ವಿಚಿತ್ರ ಡಿಸೈನ್‌ಗಳು ಇದ್ದಿದ್ದರಿಂದಲೇ ಪ್ರಖ್ಯಾತವಾದ ಚಿಂಟ್ಸ್ (Chintz) ಬಟ್ಟೆಗಳು, ('ಚೀಟಿ ಬಟ್ಟೆ'. ಈಗ ಆ ಹೆಸರೂ ಭೂಗತವಾಗಿದೆ), ಶ್ರೀಗಂಧ, ಅದರ ಎಣ್ಣೆ, ಇತ್ಯಾದಿ ಸುಗಂಧ ವಸ್ತುಗಳು, ನವಿಲುಗಳು ಮತ್ತು ಕೋತಿಗಳು, ಅಲ್ಲದೆ ಮುಖ್ಯವಾಗಿ ಸಂಬಾರ ಪದಾರ್ಥ ಅದರಲ್ಲೂ ಅತಿ ಬೆಲೆಯ ಕಪ್ಪುಮೆಣಸಿನ ಕಾಳು. ಮೆಣಸು ಎಷ್ಟು ದುಬಾರಿಯಾಗಿತ್ತೆಂದರೆ ನಮ್ಮವರು ಅವರಿಂದ ಮೆಣಸಿನಕಾಳಿನ ತೂಕಕ್ಕೆ ಸಮನಾಗಿ ಚಿನ್ನ (ಬಂಗಾರ)ವನ್ನು ತೂಗಿಸಿ ತೆಗೆದುಕೊಳ್ಳುತ್ತಿದ್ದರು!

ಮೆಣಸಿಗೇಕೆ ಇಷ್ಟು ಬೇಡಿಕೆ?

ರೆಫ್ರಿಜಿರೇಟರ್ ಇಲ್ಲದ ದಿನಗಳವು. ಆ ಚಳಿ ದೇಶಗಳಲ್ಲಿ ಚಳಿಗಾಲದಲ್ಲಿ ದನ ಕರು ಇತ್ಯಾದಿ ಪ್ರಾಣಿಗಳಿಗೆ ಮೇವು ಹೊಂದಿಸಲಾರದೆ ಅದಕ್ಕೆ ಮೊದಲೇ ಕೆಲವನ್ನು ಕೊಲ್ಲುವ ಪರಿಪಾಟವಿತ್ತು. ಎಷ್ಟೇ ಹೊಗೆಯ ರೂಮಿನಲ್ಲಿಟ್ಟು ತಂತ್ರೀಕರಿಸಿದ್ದರೂ ಆ ಮಾಂಸ (ಸ್ಮೋಕ್ಡ್ ಮೀಟ್) ತನ್ನ ಅಸಹ್ಯ ವಾಸನೆಯನ್ನು ಬಿಟ್ಟುಕೊಡದೇ ಇರುತ್ತಿದ್ದುದರಿಂದ ಅದನ್ನು ದೂರೀಕರಿಸಲು ಮತ್ತು ಕುಂದಿದ ರುಚಿಯನ್ನು ಉತ್ತಮ ಪಡಿಸಲು ಸಂಬಾರ ಪದಾರ್ಥಗಳ ಅತೀ ಅವಶ್ಯಕತೆಯಿತ್ತು.

ಇಂತಹ ಹೊನ್ನಿನ ತತ್ತಿ ಇಡುತ್ತಿದ್ದ ಬಾತುಕೋಳಿಯನ್ನು ಬಿಡಲಾರದೆ ಕರಿಕಲ ಚೋಳರಾಜ ತನ್ನ ರಾಜಧಾನಿ ಉರೆಯೂರು (ಈಗಿನ ತಿರುಚಿರಪ್ಪಳ್ಳಿ) ಬಿಟ್ಟು ಸಮುದ್ರ ತೀರದಲ್ಲಿನ ಪೂಂಪುಹಾರ್ (ಕಾವೇರಿ ಪಟ್ಟಿಣಮ್)ಗೆ ಬದಲಾಯಿಸಿದ. ಸಮಕಾಲೀನ ಕವಿ ರುದ್ರ ಕಣ್ಣನಾರ್ ಮತ್ತು ಸಂಗಮ ಸಾಹಿತ್ಯ ಅವನ ದೂರದರ್ಶಿತ್ವವನ್ನು ಪ್ರಶಂಸಿಸಿದೆ.

ಪುರಾತತ್ವ ಉತ್ಖನನದಲ್ಲಿ (ಆರ್ಕಿಯಾಲಾಜಿಕಲ್ ಎಕ್ಸ್‌ವೇಷನ್) ಪೂಂಪುಹಾರಿನ ಅಳಿದುಳಿದವು ಸಿಕ್ಕಿದೆ. ಈಗ ಕೇಂದ್ರೀಯ ಪುರಾತತ್ವ ಇಲಾಖೆ (ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ) ಮತ್ತು ಗೋವಾದಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಓಷನೋಗ್ರಾಫಿಯವರು ಪೂಂಪುಹಾರಿನ ತೀರದ ಸಮುದ್ರದಲ್ಲಿ ನಡೆಸುತ್ತಿರುವ ಸಂಶೋಧನೆಯಿಂದ ಮುಳುಗಿ ಹೋದ ಆ ನಗರದ ಅವಶೇಷಗಳು ಕಾಣ ಸಿಗುತ್ತವೆ. ಮಾರ್ಟಿಮರ್ ವೀಲರ್ ಅವರು ನಡೆಸಿದ ಪಾಂಡುಚೇರಿ (ಪುದುಚ್ಚೇರಿ) ಹತ್ತಿರದ ಅರಿಕೆ ಮೇಡು ಉತ್ಖನನದಲ್ಲಿ ವಿದೇಶಗಳಿಗೆ ರಫ್ತು ಮಾಡುತ್ತಿದ್ದ ಬಣ್ಣದ ಬಟ್ಟೆಗಳಿಗೆ ನಮ್ಮ ರಂಗಾರೆಯವರು ಬಣ್ಣ ಹಾಕಲು ಉಪಯೋಗಿಸುತ್ತಿದ್ದ ಬಾನಿಗಳು (ಟ್ಯಾಂಕ್ಸ್) ಸಿಕ್ಕಿವೆ. ಅಂತೆಯೇ ಇತರ ಕಟೆಗಳಲ್ಲೂ ಹಡಗುಗಳಿಂದ ಸಾಮಾನು ಇಳಿಸುವ ಜಾಗ (ವಾರ್ಫ್) ಮತ್ತು ಗೋದಾಮುಗಳು, ಹಡಗುಗಳನ್ನು ಚಲಿಸದಂತೆ ಕಟ್ಟಲು ಗೂಟಗಳು (ಕ್ಯಾಪ್‌ಸ್ಟನ್ಸ್) ಮತ್ತು ಮೂಟೆಗಳ ಮೇಲೆ ಒತ್ತುವ ರಾಜ ಮುದ್ರಿಕೆಗಳು ಇತ್ಯಾದಿ ಸಿಕ್ಕಿವೆ. ಇವನ್ನೆಲ್ಲಾ ಸಂಗಮ ಸಾಹಿತ್ಯ ಮೊದಲೇ ಎದುರುಕಂಡಂತೆಯೇ ಚಿತ್ರಿಸಿತ್ತು. ಆದರಿಂದಲೇ ಈ ಉತ್ಖನನಕ್ಕೆ ಬೆಲೆ. ರೋಮನ್ ಸಾಮ್ರಾಜ್ಯದ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು, ಗಾಜಿನ ಬಟ್ಟಲುಗಳು ಮತ್ತು ಬಹುಜನಪ್ರಿಯವಾದ ಕೆಂಪು ಮಣ್ಣಿನ ನುಣುಪಾದ ತಟ್ಟೆಗಳು ಮತ್ತು ಬೇಸಿನ್‌ಗಳು (ರೂಲೆಟೆಡ್ ವೇರ್). ಏಕ ಕೇಂದ್ರೀಯ ವೃತ್ತಗಳಿಂದ ಚಿತ್ರಿಸಿದ ಪ್ರದರ್ಶನ ಯೋಗ್ಯ ಆ ಸುಂದರ ತಟ್ಟೆಗಳು ಎಷ್ಟು ಜನಾನುರಾಗಿಯಾಗಿತ್ತೆಂದರೆ ಅಷ್ಟೇನೂ ಸುಂದರವಲ್ಲದ ಅದರ ನಕಲುಗಳು ಇಲ್ಲಿ ತಯಾರಾಗುತ್ತಿದ್ದವು. ನಕಲು ಮಾಡುವುದು ನಮಗೆ ಇವತ್ತಿನದಲ್ಲ, ತಲೆ ತಲಾಂತರಗಳಿಂದ ಬಂದ ಕಲೆ!

ತಮಿಳರು ಹಡಗು ಕಟ್ಟುವುದರಲ್ಲಿ ಸ್ವತಃ ನಿಪುಣರಾಗಿದ್ದರೂ ಅವರು ಯವನರ ಕುಶಲತೆಯನ್ನು ಮೆಚ್ಚುತ್ತಿದ್ದರು.

ಆ ತಮಿಳು ಗ್ರಂಥದಲ್ಲಿ ಚಿನ್ನ (ಪೊಲನ್ ಅಥವಾ ಧನಮ್)ವನ್ನು ತುಂಬಿ ತರುತ್ತಿದ್ದ ಗಟ್ಟಿಭದ್ರವಾಗಿ ವ್ಯವಸ್ಥಿತವಾಗಿ ತಯಾರಿಸಿದ ಹಡಗು (ನನ್ ಕಲಮ್)ಗಳನ್ನು ಕುರಿತು 'ಧನಮ್ ತರು ನನ್ ಕಲಮ್'. 'ಪೊಲನ್ ತರು ನಾವ್ವೆ' ಎಂತಲೇ ವ್ಯಾಖ್ಯೆಯಿದೆ.

ನಮ್ಮ ದೇಶದ ಪಶ್ಚಿಮ ಮತ್ತು ದಕ್ಷಿಣ ತೀರ ಪ್ರದೇಶಗಳಿರುವ ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಕೇರಳ ಮತ್ತು ತಮಿಳು ನಾಡಿಗೆ ರೋಮನ್ ಸಾಮ್ರಾಜ್ಯದೊಡನೆ ವ್ಯಾಪಾರ ವ್ಯವಹಾರ ಇತ್ತು. ಚಿತ್ರದುರ್ಗದ ಹತ್ತಿರದ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯ ಉತ್ಖನನದಲ್ಲಿ ರೋಮನ್ ಕಾಲದ ನಾಣ್ಯಗಳು ಮತ್ತಿತರ ಅವಶೇಷಗಳು ಸಿಕ್ಕಿವೆ. (ಬ್ರಹ್ಮಗಿರಿಯು ಕ್ರಿ.ಪೂ. 3ನೇ ಶತಮಾನದ ಚಕ್ರವರ್ತಿ ಅಶೋಕನ ಸಾಮ್ರಾಜ್ಯದ ದಕ್ಷಿಣ ತುದಿಯಾಗಿದ್ದು ಅಲ್ಲಿ ಅವನ ಶಿಲಾಶಾಸನ ಸಿಕ್ಕಿತ್ತು) ಇಷ್ಟಾದರೂ ರೋಮ್‌ನೊಡನೆ ವ್ಯಾಪಾರ, ಅದರಿಂದ ಜನ್ಯ ಐಶ್ವರ್ಯದ ವೈಖರಿ, ಜನಜೀವನ ಇತ್ಯಾದಿಗಳ ವಿವರಣೆ ತಮಿಳು ಸಾಹಿತ್ಯವನ್ನು ಬಿಟ್ಟು ನಮ್ಮ ಬೇರೆ ಯಾವ ಭಾಷೆಯಲ್ಲೂ ಸಿಕ್ಕಿಲ್ಲ. ಇಲ್ಲವೇ ಇಲ್ಲವೆನ್ನುವಷ್ಟು ಇದೆಯೆನ್ನಬಹುದು. ಕಾರಣ ತಮಿಳರು ಅದರ ಕೆನೆ ಮೊಸರನ್ನು ಮೆದ್ದದ್ದೇ!

ಉತ್ತಮ ವರ್ಗದ ರೋಮನ್ ಮಹಿಳೆಯರ ಬಟ್ಟೆ ಮತ್ತು ಸೌಂದರ್ಯ ಸಾಮಗ್ರಿಗಳ ಬೇಡಿಕೆಯನ್ನು ಪೂರೈಸಲು ಆ ಸಾಮ್ರಾಜ್ಯ ಬಹಳ ಬೆಲೆ ತೆರಬೇಕಾಗಿತ್ತು. ಇತಿಹಾಸಕಾರ ಪ್ಲಿನಿಯು ಹೇಳುವಂತೆ ``ನಮ್ಮ ಮಹಿಳೆಯರ ಫ್ಯಾಷನ್ ಹುಚ್ಚಿನಿಂದಾಗಿ ಭಾರತ (ಸಿಂಧೂ ದೇಶ) ನಮ್ಮ ಐಶ್ವರ್ಯವನ್ನು ಲೂಟಿ ಮಾಡುತ್ತಿದೆ'' ಎಂದು ರೋಮನ್ ಸೆನೇಟ್ ಸದಸ್ಯರು ಬೊಬ್ಬೆ ಹೊಡೆಯುತ್ತಿದ್ದರಂತೆ.

ಅವರಿಂದ ನಾವು ಕೊಳ್ಳುತ್ತಿದುದಾದರೂ ಏನು?

ಮುಖ್ಯವಾಗಿ ಮದ್ಯ. ರೋಮನ್ನರು ದ್ರಾಕ್ಷಾರಸವನ್ನು ತುಂಬಿಡಲು ಮಣ್ಣಿನ ಪಾತ್ರೆ 'ಎಂಫೋರೆ'ಯನ್ನು ಉಪಯೋಗಿಸುತ್ತಿದ್ದರು. ಅದು ಒಂದು ವಿಚಿತ್ರ ಶೈಲಿಯ ಎರಡೂ ಕಡೆ ಹಿಡಿದು ಕೊಳ್ಳಲು ಹಿಡಿ ಇರುವ ಮಣ್ಣಿನ ಪಾತ್ರೆ. ಎಂಫೋರೆಯಲ್ಲಿ ತುಂಬಿ ಬಂದ 'ತಣ್ಣಗಿನ ಸಿಹಿ ದ್ರಾಕ್ಷಾರಸಕ್ಕೆ ಬಹಳ ಬೇಡಿಕೆಯಿತ್ತು. ನಮ್ಮ ಸಮುದ್ರ ತೀರದಲ್ಲಿ ಅಪಘಾತಕ್ಕೆ ಈಡಾದ ಹಡಗುಗಳ ರುದ್ರಭೂಮಿಯ ತುಂಬಾ ಬರೀ ಎಂಫೋರೆಗಳೇ! ಆ ವಿದೇಶೀ ದ್ರವ 'ಇಂಪೋರ್ಟೆಡ್ ಫಾರಿನ್ ಲಿಕರ್' ನಮ್ಮ ಸ್ಟೇಟಸ್ ಸಿಂಬಲ್, ಅಹಂ ಚಿನ್ಹೆ (?)ಯಾಗಿದ್ದಿರಬೇಕು. ಪರಕೀಯ ವಸ್ತು ಅಥವಾ ಭಾಷೆಯ ಈ 'ಇಂಪೋರ್ಟೆಡ್' ಹುಚ್ಚು ಹೊಸದೇನಲ್ಲ. ಯಾವತ್ತಿನಿಂದಲೂ ಎಲ್ಲಾ ರಾಷ್ಟ್ರಗಳಲ್ಲೂ ಇದ್ದದ್ದೇ! ನಮ್ಮಲ್ಲೂ ಈ ಶತಮಾನದ ಮೊದಲಿನಲ್ಲಿ ಮುಖ್ಯವಾಗಿ ಪಂಜಾಬಿನ ಸಣ್ಣ ರಾಜ್ಯಗಳಾದ ಕಪೂರ್ತಲಾ, ನಭಾ, ಪಟಿಯಾಲಾ ಇತ್ಯಾದಿಗಳ ಮಹಾರಾಜರುಗಳು ಅದನ್ನು ಅತಿಯಾಗಿಯೇ ಮಾಡಿದರು. ವಿವಾಹಕ್ಕೆ ಫ್ರೆಂಚ್ ಕನ್ಯೆ, ಕುಡಿಯಲು ಫ್ರೆಂಚ್ ವೈನು, ಆಡಲು ಫ್ರೆಂಚ್ ಭಾಷೆ. ಝಾರ್ ಚಕ್ರವರ್ತಿಗಳ ಕಾಲದ ರಷ್ಯಾದಲ್ಲಿ ಉನ್ನತ ವರ್ಗದವರು ತಮ್ಮ ಸ್ವಂತ ರಶ್ಯನ್ ಭಾಷೆಯನ್ನು ಕುಲಕ್ (ರೈತಾಪಿ) ಭಾಷೆಯೆಂದು ಅಲ್ಲಗಳೆಯುತ್ತಾ ಫ್ರೆಂಚನ್ನೇ ಬಳಸುತ್ತಿದ್ದರು.

ನಮ್ಮಲ್ಲೂ ಹಿಂದೆ ಗೀರ್ವಾಣ (ಸಂಸ್ಕೃತ) ಭಾಷೆಯ ಬಳಕೆಯ ಹುಚ್ಚಿನಲ್ಲಿ ಕನ್ನಡವನ್ನು ಕಂಡು ಮೂಗು ಮುರಿಯುತ್ತಾ 'ಹಿತ್ತಲು ಬಟ್ಟಲು'ಗೆ 'ಬಹಿರ್ದೇಶ'ವೆನ್ನುತ್ತಿರಲಿಲ್ಲವೆ? ತಪ್ಪೋನೆಪ್ಪೋ ಆ ಸಂಸ್ಕೃತ ಶಬ್ದವನ್ನು ಅಪದ್ಧವಾಗಿ ಹೇಳುವವರೂ ಇಲ್ಲವೆ!

ನಮ್ಮ ಮುಖಕ್ಕೇ ಕನ್ನಡಿ ಹಿಡಿಯುವವರು ಯಾರು?

ಇರಲಿ. ಪುರನಾನೂರು ಗ್ರಂಥದಲ್ಲಿ ಅಂದಿನ ಮದಿರಾಪಾನಾಸಕ್ತರ ಅನುಭವದ ಚಿತ್ರೀಕೃತ ಒಕ್ಕಣೆ ಇದೆ. ಮಧುಶಾಲೆಯ ಸ್ವರ್ಗಮಾನವಾದ ಪರಿಸರದಲ್ಲಿ ಕಣ್ಣು ಕೋರೈಸುವ ಕೈ ಬಳೆಗಳನ್ನು ತೊಟ್ಟ ಮೋಹಕ ಲಾವಣ್ಯವತಿಯರು ಸುಂದರವಾದ ಚಿನ್ನದ ಪಾತ್ರೆಗಳಿಂದ ಮಾದಕವನ್ನು ಬಗ್ಗಿಸಿ ಕೊಡುತ್ತಿದ್ದರಂತೆ. ಉಮರನ ಖಯಾಮ್‌ನ ಕನಸಿನ ಪಬ್! ಈ ಚಿತ್ರಚೋರ ವರ್ಣನೆಯು 1800 ವರ್ಷಗಳಷ್ಟು ಹಿಂದಿನದೇ ಅಂತ ದಿಗ್ಭ್ರಮೆ ಹಿಡಿಸುವುದಿಲ್ಲವೆ!

# ಅಳಿಯನ ಜೊತೆ ಗೆಳೆಯ

- ಡಾ| ಜೆ. ಡಿ. ಜೋಶಿ

ಅಳಿಯನ ಜೊತೆಗೆ ಅವನ ಗೆಳೆಯನಿದ್ದನಂತೆ ಎಂಬ ಮಾತನ್ನು ಕೇಳದವರಿಲ್ಲ. ಆದರೆ ಕೇಳಿದವರು ಕೇಳದಂತಿರುವುದು ಕಂಡು ಬರುತ್ತದೆ. ಒಂದರ ಜೊತೆಗೆ ಇನ್ನೊಂದಿರುವುದು ಹಿತಕರ ಎಂದು ಹೇಳಬಹುದು. ಕೆಲಸಮಯ ಅಪಾಯಕಾರಿಯಾಗಿ ಪರಿಣಮಿಸಿದರೆ ಅದನ್ನು ಅಪವಾದ ಎಂದು ಬದಿಗೆ ತಳ್ಳಿ ಬಿಡಬಹುದು. ಹಾಗೆಯೇ ಒಂದು ಪ್ರಾಣಿಯ ಜೊತೆಗೆ ಇನ್ನೊಂದು ಪ್ರಾಣಿಯಿದ್ದು ಸಹಕಾರ ನೀಡಬಹುದು. ಉದಾಹರಣೆಗೆ ಎತ್ತಿನ ಬಂಡಿಯ ಎತ್ತಿನ ಜೋಡಿ. ಹಾಗೆಯೆ ಒಬ್ಬನೊಡನೆ ಇನ್ನೊಬ್ಬನಿರಬಹುದು. ಇರಲಿ ಅದಕ್ಕೇನಂತೆ? ಅವನು ಇನ್ನೊಬ್ಬನಿಗೆ ಸಹಾಯ ಮಾಡಿದರೆ ನಿಮಗೇಕೆ ಹೊಟ್ಟೆಕಿಚ್ಚು ಎಂದು ನೀವು ಕೇಳಬಹುದು. ಆದರೆ ಮನುಷ್ಯ ಪ್ರಾಣಿ ಒಂದು ವಿಚಿತ್ರ ಪ್ರಾಣಿ. ಅದಕ್ಕೆ ಬುದ್ಧಿ ಶಕ್ತಿ ಹೆಚ್ಚು. ಆದ್ದರಿಂದ ತಂತ್ರ ಶಕ್ತಿ ಸ್ವಾಭಾವಿಕವಾಗಿ ಹೆಚ್ಚಾಗಿರುತ್ತದೆ. ಇಲ್ಲಿ `ತಂತ್ರ' ಎಂದರೆ ಕುತಂತ್ರ ಎಂದೇ ಅರ್ಥೈಸುವುದು ಜೊತೆಗಿರುವವನ ದೃಷ್ಟಿಯಿಂದ ವಿಹಿತವಾದದ್ದು.

ಇನ್ನು, ಒಬ್ಬ ವ್ಯಕ್ತಿಯಲ್ಲಿಯೇ ಕೆಲವು ಗುಣಗಳು, ಸ್ವಭಾವಗಳು, ವಿಶೇಷತೆಗಳು, ಅರ್ಹತೆಗಳು ಇರುತ್ತವೆ. ಅವುಗಳಲ್ಲಿ ಸಹಾಯದ ದನಿ ಗೂಡಿಸುವಂಥ ಜೊತೆ ಇದ್ದರೆ ಹಾಲು-ಸಕ್ಕರೆಯಷ್ಟು ಸೌಹಾರ್ದ, ಸಹಕಾರಗಳಿರುತ್ತವೆ. ಕೆಲವು ವ್ಯಕ್ತಿಗಳಿಗಂತೂ ಜೊತೆಗೆ ಅನಿವಾರ್ಯವಾಗಿ ಇನ್ನೊಂದು ಸಹಾಯಕ ವ್ಯಕ್ತಿ ಇರಲೇ ಬೇಕಾಗುತ್ತದೆ. ಅವುಗಳಿಲ್ಲದೆ ಹೋದರೆ ವೃತ್ತಿಯಲ್ಲಿ ಸಾಫಲ್ಯ ದೊರೆಯದೆ ಬರಡು ಬಾಳನ್ನು ಅನುಭವಿಸುತ್ತ, ಭೂಮಿಗೆ ಭಾರವಾಗಿ ಬಾಳ ಬೇಕಾಗುವ ಪ್ರಸಂಗ ನಿಧಾನವಾಗಿ ಒದಗಿ ಬರುತ್ತದೆ.

ಡಾಕ್ಟರ್ ಅಥವಾ ವೈದ್ಯಕೀಯ ವೃತ್ತಿಯನ್ನು ಉದಾಹರಣೆಗಾಗಿ ಮೊದಲು ತೆಗೆದುಕೊಳ್ಳೋಣ. ಪಾಪ ಡಾಕ್ಟರ ಪದವಿ ಪಡೆಯಲು ಎಷ್ಟೆಷ್ಟು ಕಷ್ಟ ಪಟ್ಟಿರುತ್ತಾರೆ. ಮನೆಯವರನ್ನು ತೊಂದರೆಯಲ್ಲಿ ಸಿಲುಕಿಸಿರುತ್ತಾರೆ ಎಂಬುದು ಇಲ್ಲಿ ಪ್ರಸ್ತುತವಲ್ಲ. ಇಲ್ಲವೆ ಯಾವುದಾದರೊಂದು ದೊಡ್ಡ ವಶೀಲಿಯಿಂದ ದೊಡ್ಡ ಆಸ್ಪತ್ರೆಯಲ್ಲಾಗಲಿ, ಕ್ಲಿನಿಕ್ಕಿನಲ್ಲಾಗಲಿ ಗಲಾಟೆ ಮಾಡದೆ ನುಸುಳಿ ಕೊಂಡ ಡಾಕ್ಟರೂ ಇಲ್ಲಿ ಉಲ್ಲೇಖ ಪಡೆಯುವ ಅವಕಾಶ ಗಿಟ್ಟಿಸಿಕೊಳ್ಳಲು ಸಾಧ್ಯವಿಲ್ಲ. ಇಲ್ಲಿ ಬಹಳ ಪ್ರಯಾಸ ಪಟ್ಟು, ಡಿಗ್ರಿ ಮುಗಿಸಿ ಮಾವನ ಇಲ್ಲವೆ ತಂದೆಯ ವೈದ್ಯಕೀಯ ಆಧಾರವಿಲ್ಲದೆ, ಸಾಲ ಪಡೆದು ಒಂದು ಡಾಕ್ಟರ್ ಶಾಪ್ (ಡಿಸ್ಪೆನ್ಸರಿ) ಮಾಡಿದಂಥವರು ನಮ್ಮ ಗಮನದಲ್ಲಿರುವವರು ಎಂದು ವಿನಮ್ರವಾಗಿ ತಿಳಿಸ ಬಯಸುತ್ತೇನೆ. ಯಾರ್ಯಾರ ಸಹಾಯದಿಂದಲೋ ಶಾಪಿನ ಉದ್ಘಾಟನೆ ಮಾಡಿಸಲು, ಆಮಂತ್ರಣ ಪತ್ರಿಕೆ ಹಂಚಲು, ಸ್ವತಃ ತನ್ನ ಹಳೆ ಮಿತ್ರರನ್ನು ಪತ್ತೆ ಹಚ್ಚಿ ಕೆಲವರನ್ನು ಸೇರಿಸಿ ಕೈ ಸುಟ್ಟುಕೊಂಡ ಎಳೆಯ ಡಾಕ್ಟರ್ ಮುಖ್ಯ. ಇಷ್ಟೆಲ್ಲಾ ಖರ್ಚು ಮಾಡಿ, ಮಾಡಿಸಿ, ಉಪಕರಣ ಸಂಗ್ರಹಿಸಿ, ಬೋರ್ಡು ಹಾಕಿಸಿ ಒಳಗೆ ತಿರುಗುವ ಕುರ್ಚಿಯಲ್ಲಿ ಕುಳಿತು ಗಿರಾಕಿಗಳ ದಾರಿ ಕಾಯಬೇಕಾಗುತ್ತದೆ. ಹೆಚ್ಚು ಹೆಚ್ಚು ಜನರು ರೋಗಕ್ಕೆ ಬಲಿಯಾಗುವುದಿಲ್ಲವೇಕೆ? ತನ್ನ ಬಳಿ ಉಪಚಾರಕ್ಕೆ ಬರುವುದಿಲ್ಲವೇಕೆ? ಎಂಬುದೇ ಅವನ ಸಮಸ್ಯೆ. ಮನಸ್ಸಿನಲ್ಲಿ ಮಂಡಿಗೆ ತಿಂದು, ತಿಂದು ಈಗ ಅವನಿಗೆ ದೊರೆತದ್ದೇನು? ಅವನು ತಾಳ್ಮೆ ವಹಿಸಲೇ ಬೇಕಾಗುತ್ತದೆ. ಪ್ರಾರಂಭದ ಜೀವನದಲ್ಲಿ ಡಾಕ್ಟರನಿಗೆ ಸಹಾಯಕವಾಗುವ ಜೊತೆಯ ಹವ್ಯಾಸ ಎಂದರೆ ನೊಣ ಹೊಡೆಯುವುದು ಎನ್ನಬಹುದು. ಇನ್ನು ಅವನು ಒಬ್ಬ ತರುಣಿಯನ್ನು ಕಂಪೌಂಡರ್ ಎಂಬ ಹಣೆಪಟ್ಟಿ ಅಂಟಿಸಿ ಔಷಧಗಳ ನಡುವೆ ಒಂದು ಚೌಕಿಯಲ್ಲಿ ಕೂಡಿಸಿದ್ದರೆ ಅವನು ಅವಳನ್ನು ಆಗಾಗ ನೋಡಿ ಸಂತೋಷ ಪಡಬಹುದು ಎಂದು ಕೊಂಡಿರಬೇಕು. ನೀವು. ಇಲ್ಲ, ಸ್ವಾಮಿ. ಅವಳು `ಕೆಲಸವಿಲ್ಲದ ಕೇವಲ ತೂಕಡಿಸಿ ಇವನಿಂದ ಪ್ರತಿ ತಿಂಗಳು ಪಗಾರ ಪಡೆದರೆ ಇವನಿಗೆಲ್ಲಿಯ ಸುಖ. ಹಾಂ! ಅವಳಿಗೆ ತೂಕಡಿಕೆ ಆಗ ಸಹಕಾರೀ ವೃತ್ತಿಯಾಗಿ ಪರಿಣಮಿಸಿ ಅವಳ ಜೀವನವನ್ನು ಸುಗಮಗೊಳಿಸುತ್ತದೆ. ಬೇಸರ ಕಳೆಯುತ್ತದೆ.

ಪ್ರಾರಂಭದಲ್ಲಿ ಡಾಕ್ಟರನಿಗೆ ಸಾಯ್ಕಲ್ ನಡೆಸುವುದು ತಿಳಿದಿರಬೇಕಾಗಿತ್ತು, ಅನಂತರ ಸ್ಕೂಟರ್ ನಡೆಸುವುದು. ಅವನು ಹೆಸರು ಗಳಿಸಿ ಮುದುಕನಾದಾಗ ಕಾರು ನಡೆಸುವ ಕಲೆ ತಿಳಿದಿರಬೇಕಾಗುತ್ತದೆ.

ಯಾವುದಾದರೊಂದು ಹೈ ಸ್ಕೂಲಿನ ದೊಡ್ಡ ವರ್ಗದಲ್ಲಿ ಪ್ರವೇಶ ಮಾಡಿದಾಗ ಅನುಭವೀ ಶಿಕ್ಷಕರು ವೇಳೆ ಕಳೆಯಲು ಒಂದು ಉಪಾಯ ಮಾಡುತ್ತಾರೆ. ``ಈಗ ಒಬ್ಬೊಬ್ಬರೇ ಎದ್ದು ನಿಂತು ನಿಮ್ಮ ತಂದೆ ಯಾವ ಕೆಲಸದಲ್ಲಿದ್ದಾರೆ? ನೀವು ಕಲಿತು ಯಾವ ವೃತ್ತಿಯಲ್ಲಿ ಸೇರಬಯಸುತ್ತೀರಿ?'' ಎಂಬ ಪ್ರಶ್ನೆಗಳನ್ನು ಕೇಳಿ, ಅವರು ಉತ್ತರ ಹೇಳಿದಾಗ ಕೇಳದಂತೆ ಅಭಿನಯಿಸುತ್ತಾ ಕುಳಿತು ಕೊಂಡಿರುತ್ತಾನೆ. ಶಿಕ್ಷಕನಿಗೆ ಅಭಿನಯ ಒಂದು ಜೊತೆಯ ಸಹಕಾರಿ ಕಲೆ. ವಿದ್ಯಾರ್ಥಿಗಳಿಂದ ಹೆಚ್ಚಾಗಿ ಬರುವ ಉತ್ತರಗಳು `ಡಾಕ್ಟರ್', `ಇಂಜಿನಿಯರ್ ಮಾತ್ರ. ಯಾರೂ ಶಿಕ್ಷಕನಾಗುತ್ತೇನೆ ಎನ್ನುವುದಿಲ್ಲ, ಕಾರಕೂನನಾಗಿ ಬ್ಯಾಂಕಿನಲ್ಲಿ ಕೊಳೆಯುತ್ತೇನೆ ಎನ್ನುವುದಿಲ್ಲ ಎಂಬುದು ವಿಶೇಷ.

ಹಾಗೆ ನೋಡಿದರೆ ಡಾಕ್ಟರ್ ಆಗುವುದು ಇಂಜಿನಿಯರ್ ಆಗುವುದಕ್ಕಿಂತ ಇಂದಿನ ಕಾಲದಲ್ಲಿ ಕಠಿಣ ಎನಿಸುತ್ತಿದೆ. ಇಂಜಿನಿಯರರು ಡಾಕ್ಟರರಿಗಿಂತ ಬುದ್ಧಿವಂತರು ಎನಿಸುತ್ತದೆ. ಇಂಜಿನಿಯರ್ ಆದವರಲ್ಲಿ ಹೆಚ್ಚಿನವರು ಸ್ವಂತ ಹಣ ಹಾಕಿ ತೂಕಡಿಸಿದರೆ, ನೊಣ ಹೊಡೆಯದೆ ಯಾವುದಾದರೂ ಕಂಪನಿಯಲ್ಲಿ ಸೇರಿ ನೌಕರಿ ಮಾಡುತ್ತಾರೆ. ವ್ಯಾಪಾರವಾಗದಿದ್ದರೆ ಇವನಿಗೆ ಹಾನಿಯಿಲ್ಲ. ಪ್ರತಿ ತಿಂಗಳು ಇವನಿಗೆ ಕೈ ತುಂಬ ಸಂಬಳ. ವರ್ಷದ ಕೊನೆಗೆ ಬೋನಸ್ ಮತ್ತು ಪಗಾರದಲ್ಲಿ ಹೆಚ್ಚಳ! ಇನ್ನೇನು ಬೇಕು ಬುದ್ಧಿವಂತಿಕೆ ಪ್ರಕಟಿಸಲು ಹೇಳಿ? ಮಾವನ ಹಣದಲ್ಲಿ ಫ್ಯಾಕ್ಟರಿ ಹಾಕಿದವರಿಗೆ ತೊಂದರೆ ಇಲ್ಲ. ಆದರೆ ಅದು ಹೆಣ್ಣು ಕೊಟ್ಟು ಮಾವನಿಗೆ. ಊರು ಸುಟ್ಟರೂ ಹಣಮಪ್ಪ ಹೊರಗೆ ಎಂಬಂತೆ.

ಹಾಗೆ ನೋಡಿದರೆ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿದವರು ಅದರೊಡನೆ ಸಾಮರಸ್ಯ ಹೊಂದಲು ಒಂದೊಂದು ಪ್ರವೃತ್ತಿಯನ್ನು ಸಾಕಿ ಕೊಂಡಿರುವುದು ಅನಿವಾರ್ಯವೆಂದೇ ಹೇಳಬಹುದು. ಅದು ಚಹಾದ ಜೋಡಿ ಚೂಡಾ ಇದ್ದ ಹಾಗೆ.

``ಶ್ರೀಯುತರು ವೃತ್ತಿಯಿಂದ ವಕೀಲರು ಪ್ರವೃತ್ತಿಯಿಂದ ನಟರು'' ಎಂಬುದನ್ನು ಇಂದಿನ ದೂರದರ್ಶನದ ಹಾವಳಿಯ ದಿನಗಳಲ್ಲಿ ಪ್ರತಿಪಾದಿಸುವ ಆವಶ್ಯಕತೆ ಏನೇನೂ ಇಲ್ಲ. ಕೋರ್ಟಿನ ಸನ್ನಿವೇಶವಿಲ್ಲದ ಧಾರಾವಾಹಿ (ಸೀರಿಯಲ್) ದೊರೆಯುವುದೇ ವಿರಳ. ಬೇಡಿಕೆಗೆ ತಕ್ಕಂತೆ ಪೂರೈಕೆ ಅಲ್ಲವೆ. ಟಿ.ವಿ. ನೋಡುವವರಿಗೆ ಕೋರ್ಟಿನಲ್ಲಿ ನಡೆಯುವ ತಮಾಷೆ ಬೇಕು. ಅದನ್ನವರು ಸ್ವಲ್ಪ ಹೆಚ್ಚು ಉತ್ಪ್ರೇಕ್ಷಿಸಿ ನಾಟಕೀಕರಣ ಮಾಡಿ ತೋರಿಸಲೇ ಬೇಕು. ನಿಜ ಸ್ಥಿತಿಯಲ್ಲಿ ಕೋರ್ಟಿನ ಸನ್ನಿವೇಶ ಸಿನೇಮಾ ಇಲ್ಲವೆ ದೂರದರ್ಶನದ ಸನ್ನಿವೇಶಗಳ ಮುಂದೆ ಬಹಳ ಸಪ್ಪೆ ಎನಿಸುತ್ತದೆ. ನಿಜವಾದ ಕೋರ್ಟು, ಅದರ ಸನ್ನಿವೇಶ ನೋಡಿದವರೆಷ್ಟು? ಇಂದಿಗೂ ಕೋರ್ಟು ಎಂದರೆ ನಮ್ಮ ದೇಶದಲ್ಲಿ ಗಡಗಡ ನಡುಗುವ ಜನರೇ ಹೆಚ್ಚು.

ಇಂಥ ವೃತ್ತಿ, ಪ್ರವೃತ್ತಿಗಳ ಸುಸಾಂಗತ್ಯದ ವಿಚಾರ ಒಂದು ಕಾಲ್ಪನಿಕ `ಕ್ವಿಝ್' ಕಲ್ಪಿಸಿ ಕೊಂಡರೆ ಸುಲಭವಾಗಿ ಅದು ನಮ್ಮ ಕಣ್ಣೆದುರು ನಡೆದಂತಾಗಬಹುದು. ಈ `ಕ್ವಿಝ್'ದಲ್ಲಿ (ಪ್ರಶ್ನೋತ್ತರ ಸ್ಪರ್ಧೆ) ನಾನು ಪ್ರಶ್ನೆ ಕೇಳಿ, ಸರಿ-ತಪ್ಪು ಸಾರುವ ನಿರ್ವಾಹಕನಾದರೆ, ನೀವು ವಿದ್ಯಾರ್ಥಿ ಇಲ್ಲವೆ ಶಿಕ್ಷಕ ಇಲ್ಲವೆ ಪಾಲಕರಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ.

ನಾನು : ಟೂರಿಸ್ಟ್ ಬಸ್ಸಿನ ಡ್ರೈವರನು ಯಾವ

ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು?

ವಿದ್ಯಾರ್ಥಿ:ಬಸ್ಸಿನ ಚಿಕ್ಕ ಪುಟ್ಟ ರಿಪೇರಿ ಕೆಲಸ.

ಪಾಲಕ:ಸಿಗರೇಟು ಸೇದುವುದೂ ಸರಿಯಲ್ಲವೆ?

ನಾನು: ಸರಿ. ಆದರೆ ನಿಮಗೆ ಈಗ ಸರಿ ಎಂದು ನಾನು ಹೇಳುವಂತಿಲ್ಲ. ಏಕೆಂದರೆ ಆ ಉತ್ತರ ನನ್ನ ಉತ್ತರದ ಕಾರ್ಡಿನಲ್ಲಿ ಬರೆದಿಲ್ಲ. ಈ ಸ್ಪರ್ಧೆಯಲ್ಲಿ ಆ ಸರಿಯಾದ ಉತ್ತರಕ್ಕೆ ಗುಣಗಳು ದೊರೆಯಲಾರವು. ಇದು ನನ್ನ ಅಂತಿಮ ತೀರ್ಮಾನ. ಮುಂದಿನ ಪ್ರಶ್ನೆ ಹೀಗಿದೆ - ಬಸ್ಸ್ ಕಂಡಕ್ಟರ್ ಯಾವ ಪ್ರವೃತ್ತಿಯಿಂದ ಲಾಭ ಪಡೆದಾನು?

ವಿ : ಹೆಂಗಸರ ಕಡೆಗೆ ನೋಡುತ್ತ ಶೀಟಿ ಹಾಕುವುದು.

ನಾ : ತಪ್ಪು ತಪ್ಪು. ಶೀಟಿ ಹಾಕುತ್ತ ಬಸ್ಸು ಓಡಿಸುವುದು ಅವನ ವೃತ್ತಿಯ ಭಾಗ. ಪ್ರವೃತ್ತಿಯಲ್ಲ.

ಪಾ : ಸರ್ಕಸ್ಸಿನವರು ತಂತಿಯ ಮೇಲೆ ಬೀಳದಂತೆ ನಡೆಯುವ ಹಾಗೆ ಇವನು ಬಸ್ಸಿನಲ್ಲಿ ಬೀಳದಂತೆ ಬ್ಯಾಲನ್ಸ್ ಮಾಡುವುದು.

ನಾ : ಸರಿ. ಮುಂಬಯಿ ಲೋಕಲ್ ಗಾಡಿಯ ಪ್ರವಾಸಿ?

ಶಿ : ಯೋಗಾಸನ ಪಟುತ್ವ

ನಾ : ಸರಿ. ಸಂಜೆ ದಾದರ್ ಪೇಟೆಯಲ್ಲಿ ತಿರುಗಾಡುವವನು?

ವಿ : ಹೈ ಜಂಪ್ ಪಟುತ್ವ

ನಾ : ಸರಿ. ವಿಮಾನ ಪ್ರಯಾಣಿಕನು ರೂಢಿಸಿ ಕೊಳ್ಳಬೇಕಾದ ಹವ್ಯಾಸ?

ಪಾ : ಈಜುವುದು. ಸಮುದ್ರದಲ್ಲಿ ವಿಮಾನ ಬಿದ್ದರೆ ಈಜಿ ಪಾರಾಗಬಹುದು.

ನಾ : ಸರಿ. ಭಾರತದ ಬಡವ ಏನನ್ನು ರೂಢಿಸಿ ಕೊಂಡಿರಬೇಕು?

ಪಾ : ನಿಮಿಷ ನಿಮಿಷ ಆದ ಅವಮಾನ ಸಹಿಸಿಕೊಂಡು ಶ್ರೀಮಂತನಂತೆ ನಟಿಸುವುದು.

ನಾ : ಸರಿ. ಭಾರತದ ಶ್ರೀಮಂತ?

ವಿ : ರೋಗಗಳನ್ನು ಮುಚ್ಚಿಟ್ಟು ಕೊಂಡು ಸ್ವಾಸ್ಥ್ಯದಲ್ಲಿದ್ದಂತೆ ತೋರಿಸುವುದು.

ನಾ : ಸರಿ. ಪೋಸ್ಟ್‌ಮನ್?

ಪಾ : ಹಂಚದೆ ಉಳಿದ ಪತ್ರಗಳನ್ನು ಮಧ್ಯರಾತ್ರಿ ಎದ್ದು ಬಾವಿಯಲ್ಲಿ ಹಾಕುವುದು.

ನಾ : ಸರಿ, ಸರಿ. ವ್ಯಾಪಾರಿ?

ಪಾ : ಸಂಭಾವಿತನಂತೆ ನಟಿಸುತ್ತ, ತೂಕದಲ್ಲಿ, ಬೆಲೆಯಲ್ಲಿ, ವಸ್ತುವಿನ ಗುಣಮಟ್ಟದಲ್ಲಿ ಗಿರಾಕಿಗೆ ಮೋಸ ಮಾಡುವುದು.

ನಾ : ಸರಿ. ಟೈಪಿಸ್ಟಿನ ಪ್ರವೃತ್ತಿ ಯಾವುದಿರಬೇಕು?

ವಿ : ಮಾಡಿದ ತಪ್ಪುಗಳನ್ನು ಉಜ್ಜಿ, ಅಲ್ಲಿ ಸರಿಯಾದ ಅಕ್ಷರ ಟೈಪು ಮಾಡಿ ಹೆಸರುವಾಸಿಯಾಗುವುದು?

ನಾ : ಸರಿ. ಆಟಗಾರ?

ಶಿ : ಕಷ್ಟಪಟ್ಟು ಪ್ರ್ಯಾಕ್ಟೀಸ್ ಮಾಡದೆ ವಶೀಲಿಯಿಂದ ಟೀಮಿನಲ್ಲಿ ನುಸುಳುವ ಕಲೆ.

ನಾ : ಸರಿ. ಸೇಲ್ಸ್‌ಮನ್?

ಪಾ : ಮನೆ ಮನೆ ಬಾಗಿಲು ತಟ್ಟಿ ಬಯ್ಸಿಕೊಂಡು ಪೆಚ್ಚಾಗಿ ತಾಳ್ಮೆ ವಹಿಸುವ ಗುಣ.

ನಾ : ಸರಿಯಾಗಿದೆ. ಕೊನೆಯ ಪ್ರಶ್ನೆ. ಗಮನ ಕೊಡಿರಿ. ನಗರಪಾಲಿಕೆಯ ಕಸಗೂಡಿಸುವವ?

ಪಾ : ಉದ್ದ ಕಸಬರಿಗೆ ಕೈಯಲ್ಲಿ ಹಿಡಿದು, ನೆಲಕ್ಕೆ ಮುಟ್ಟದಂತೆ ಮೇಲಿಂದ ಮೇಲೆಯೇ ಕಸಗೂಡಿಸಿದಂತೆ (ನಾಟಕದಂತೆ) ನಟಿಸುವ, ನರ್ತಿಸುವ ಕಲೆ.

ನಾ : ಸರಿಯಾಗಿದೆ. ಭಾಗವಹಿಸಿದವರೆಲ್ಲರಿಗೂ ಅಭಿನಂದನೆಗಳು. ಗಣಕ ಯಂತ್ರ ಕೆಟ್ಟು ಹೋಗಿದೆ. ಫಲಿತಾಂಶ ಅಂಚೆಯಲ್ಲಿ ತಿಳಿಸುತ್ತೇನೆ. ನಮಸ್ಕಾರ.

## ಅಭಿನಂದನೆಗಳು



ಆರ್. ಜೆ. ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿರುವ ಶ್ರೀ ಕೆ. ರಘುನಾಥ ಅವರು ವಿಶ್ವ ವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿರುವ ಡಾ। ತಾಳ್ತಜೆ ವಸಂತಕುಮಾರರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸಿದ, ``ನವ್ಯ ಸಾಹಿತ್ಯದಲ್ಲಿ ನಗರ ಪ್ರಜ್ಞೆ: ಒಂದು ಅಧ್ಯಯನ'' ಎಂಬ ಮಹಾಪ್ರಬಂಧವನ್ನು ಮನ್ನಿಸಿ ಮುಂಬಯಿ ವಿಶ್ವವಿದ್ಯಾಲಯವು ಅವರಿಗೆ ಪಿಎಚ್.ಡಿ. ಪದವಿ ನೀಡಿದೆ. `ನೇಸರು' ಪರವಾಗಿ ಶ್ರೀ ರಘುನಾಥರಿಗೆ ಅಭಿನಂದನೆಗಳು.

## ಗೋರೆಗಾಂವ್ ಕರ್ನಾಟಕ ಸಂಘ

### ದ್ವಿತೀಯ ಮಹಿಳಾ ಸಾಹಿತ್ಯ ಸಮ್ಮೇಳನ 1997

### ಪಶ್ಚಿಮ ಉಪನಗರ ಮುಂಬಯಿ

ಸಂಘದ ಮಹಿಳಾ ವಿಭಾಗವು ತನ್ನ ದ್ವಿತೀಯ ಸಾಹಿತ್ಯ ಸಮ್ಮೇಳನವನ್ನು 1997ರ ಜನವರಿ 5ರಂದು ರವಿವಾರ ಗೋರೆಗಾಂವ್ ಪರಿಸರದಲ್ಲಿರುವ ಪಾಟ್‌ಕರ್ ಕಾಲೇಜಿನ ಸಭಾಗೃಹದಲ್ಲಿ ಸಂಯೋಜಿಸುವುದಾಗಿ ನಿರ್ಧರಿಸಿದೆ.

ಸಮ್ಮೇಳನದ ಅಧ್ಯಕ್ಷತೆಯನ್ನು ಮಂಗಳೂರಿನ ಖ್ಯಾತ ಕಾದಂಬರಿಗಾರ್ತಿ ಹಾಗೂ ಹಿರಿಯ ಲೇಖಕಿ ಶ್ರೀಮತಿ ಸಾರಾ ಅಬೂಬಕ್ಕರ್ ಅವರು ವಹಿಸಲಿರುವರು. ಉದ್ಘಾಟನೆ ರಾಜ್ಯ ಸರಕಾರದ ಮಾಜಿ ಆರೋಗ್ಯ ಸಚಿವೆ ಡಾ। ಲಲಿತಾ ರಾವ್ ಅವರಿಂದ ನಡೆಯಲಿದೆ. ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಸ್ಥಳೀಯ ಖ್ಯಾತ ಕವಯತ್ರಿ ಹಾಗೂ ವಿಮರ್ಶಕಿ ಡಾ। ಸುನೀತಾ ಎಂ. ಶೆಟ್ಟಿಯವರು ಆಗಮಿಸಲಿದ್ದಾರೆ.

ಸಮ್ಮೇಳನದಂದು ನಡೆಯಲಿರುವ ಎರಡು ವೈಚಾರಿಕ ಗೋಷ್ಠಿ ಹಾಗೂ ಕವಿಗೋಷ್ಠಿಗಳಲ್ಲಿ ಸ್ಥಳೀಯ ಹಾಗೂ ಒಳನಾಡಿನ ಲೇಖಕಿಯರು ಭಾಗವಹಿಸಲಿರುವರು. ಬೇರೆ ಬೇರೆ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆಗೈದ ಮಹಿಳೆಯರಿಗೆ ಸನ್ಮಾನ ನಡೆಯಲಿದೆ. ಮುಂಬಯಿ ಲೇಖಕಿಯರ ಕೃತಿಗಳ ಪ್ರದರ್ಶನದ ಏರ್ಪಾಡು ನಡೆಸಲಿದ್ದೇವೆ. ಸಮ್ಮೇಳನದ ಅಂಗವಾಗಿ ಹೊಸ ಕೃತಿಯ ಬಿಡುಗಡೆಯೂ ನೆರವೇರಲಿದೆ. ಸಾಂಸ್ಕೃತಿಕ ಕಾರ್ಯಕ್ರಮದ ಯೋಜನೆಯ ಪ್ರಮುಖ ಆಕರ್ಷಣೆ : ಮುಂಬಯಿಯ ಹೆಸರಾಂತ ನಾಟಕಕಾರ್ತಿ, ನಟಿ, ದಿಗ್ದರ್ಶಕಿಯಾದ ಶ್ರೀಮತಿ ಭಾರತಿ ಕೊಡ್ಲೇಕರ್ ಅವರು ಬರೆದು, ದಿಗ್ದರ್ಶಿಸಿದ ಮಹಿಳಾ ಪಾತ್ರ ಪ್ರಧಾನ ನಾಟಕ `ಸಮಾಜಕ್ಕೆ ಸವಾಲು'

ಪ್ರಾತಃಕಾಲ-ಉಪಾಹಾರ -ಚಹಾಗಳ ವ್ಯವಸ್ಥೆ; ಅಪರಾಹ್ನ - ರುಚಿಕಟ್ಟಾದ ಭೋಜನ, ಸಂಜೆ -ಚಹಾ - ಪಾನೀಯಗಳ ವಿತರಣೆ.

ಸಂದರ್ಶನ :

# ನಟ ನಿರ್ದೇಶಕ ಶ್ರೀ ಸುಬ್ಬರಾಯ ಭಟ್ಟ

● ರೇಖಾ

ಶ್ರೀ ಸುಬ್ರಾಯ ಭಟ್ಟರು ಹಲವಾರು ವರ್ಷಗಳಿಂದ ಮುಂಬೈನ ನಾಟಕ ಪ್ರಿಯರಿಗೆ ಪರಿಚಿತರು. ಪ್ರೊ. ರಂಗನಾಥ ಭಾರದ್ವಾಜರ ಶಿಷ್ಯರೆಂದು ಜನಪ್ರಿಯರಾದ ಈತ N C P A ನ Little Theatreನಲ್ಲಿ ನಾಟಕವೊಂದನ್ನು ಬರೆದು, ನಿರ್ದೇಶಿಸಿ ಪ್ರದರ್ಶಿಸಿ ಬಂದಿದ್ದರು. ಸುಮಾರು 30ವರ್ಷಗಳು ಮುಂಬೈನಲ್ಲಿ ನೆಲಸಿದ್ದ ಸುಬ್ರಾಯ ಭಟ್ಟರು ನಾಲ್ಕಾರು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. `ಸಾಂಖ್ಯಿಕ ಸಂಸಾರ' ನಾಟಕದ ತಾಲೀಮನ್ನು ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ನಡೆಸುವ ಸಮಯದಲ್ಲಿ `ನೇಸರು'ಗಾಗಿ ಇವರನ್ನು ಸಂದರ್ಶಿಸಿದೆ.

**ನಿಮ್ಮ ನಾಟಕ 'ಸಾಂಖ್ಯಿರ ಸಂಸಾರ'ದ ಬಗ್ಗೆ ತಿಳಿಸಿ**

`ಸಂಖ್ಯಿರ ಸಂಸಾರ' ಅಥವಾ `Numberland' ಹಳ್ಳಿಯಿಂದ ಏನೋ ಆಗಬೇಕೆಂದು ಬಂದವನೊಬ್ಬನ ಪಟ್ಟಣದ ಅನುಭವ. ಪಟ್ಟಣದ ಯಾಂತ್ರಿಕ ಬದುಕಲ್ಲಿ ಏನೋ ಆಗಬೇಕೆಂದು ಬಂದವನು ಏನೂ ಆಗದೆ ಉಳೀತಾನೆ. Nobody ಆಗದೆ somebody ಆಗೋದು ಅಸಾಧ್ಯಾಂತ ಅರೀತಾನೆ. ಈ Nobody ಆಗೋ ಪ್ರಕ್ರಿಯ ನಾಟಕದ ವಸ್ತು. ತನ್ನದೆಂದು ಹೇಳಿಕೊಳ್ಳುವ ಅವಕಾಶವೇ ಸಿಗದಾಗ he becomes an Indicator than an individual

**ಇದರ concept ಯಾರದು?**

ನಂದೇ ಅಂತ ಹೇಳಿದರೂ ಭಾರದ್ವಾಜರ ಮಿಕ್ಕ ನಾಟಕಗಳ ಪ್ರಭಾವ ಛಾಯೆ ಇದರಲ್ಲಿ ಕಂಡು ಬರುತ್ತದೆ. ಯಾವ ತರಾ ಪ್ರದರ್ಶಿಸಬೇಕೆಂದು ಭಾರದ್ವಾಜರೇ guide ಮಾಡಿದ್ದಾರೆ. ನಾನಿಲ್ಲಿ ನಟರನ್ನು ಸೇರಿಸಿ ತಾಲೀಮು ಕೊಟ್ಟು ಪ್ರದರ್ಶಿಸುತ್ತಿದ್ದೇನೆ.

**ಇದೇ ಮೊದಲ ಪ್ರದರ್ಶನವೇ?**

ಬೆಂಗಳೂರಿನಲ್ಲಿ ನಾಟಕವನ್ನು ಒಮ್ಮೆ ಓದಿದ್ದೆ. ಇಲ್ಲೇ ಮೊದಲ ಪ್ರದರ್ಶನ.

**ಮುಂಬೈನಲ್ಲೇ ಏಕೆ ಪ್ರದರ್ಶಿಸುತ್ತಿದ್ದೀರಿ?**

ನಾನು ಮೂಲತಃ ಮುಂಬೈನವನೇ. "ವಿಜಾಯಾನಂದ ಆರ್ಟ್ಸ್" N CPAನಲ್ಲಿ ಪ್ರತಿವರ್ಷ ಒಂದು ನಾಟಕ ಪ್ರದರ್ಶಿಸುತ್ತದೆ. 25ವರ್ಷಗಳ ಹಿಂದೆ ಭಾರದ್ವಾಜರು ಮತ್ತು ಹಲವು ಮಿತ್ರರು ಸೇರಿ ಸ್ಥಾಪಿಸಿದ ಸಂಸ್ಥೆಯಿದು.

**ನಿಮಗಿರುವ ಅನುಭವಗಳೇನು?**

ಭಾರದ್ವಾಜರು ಪರಿಚಯ ಆಗುವ ಮುನ್ನವೇ ಮೂರು ತಾಸಿನ ಏಕ ಪಾತ್ರ ಪ್ರಯೋಗ ಮಾಡ್ತಿದ್ದೆ. "ಕಂಡದ್ದು ಕೇಳಿದ್ದು" ಮುಂಬೈನಲ್ಲಿ ಮೊದಲ ಪ್ರದರ್ಶನ ಕಂಡ ನಂತರ ಕರ್ನಾಟಕದ ಹಲವು ಕಡೆ ಪ್ರದರ್ಶನ



ಕಂಡಿತು. `ರಂಗಭೂಮಿ'ಯಿಂದ ನಾಟಕದ ಡಿಪ್ಲೋಮಾ ಮಾಡಿದ್ದೇನೆ. ಅಲ್ಲಿ ಉಂಟಾದ ಹಿರಿಯ ಹಾಗೂ ಅನುಭವಿ ನಟರೊಂದಿಗಿನ ಸಂಪರ್ಕ ಕೂಡ ನನ್ನ ರೂಪಿಸಿತು. ಧಾರವಾಡದಲ್ಲಿ ಬಾಸೆಲ್ ಮಿಷನ್ ಸ್ಕೂಲಿನಿಂದಲೇ ನಾಟಕ ಗೀಳು. ಅಲ್ಲಿನ ಹೆಡ್ ಮಾಸ್ಟರ್ ಮತ್ತು ಅವರ ಹೆಂಡತಿ ಕೊಡುತ್ತಿದ್ದ ಉತ್ತೇಜನ ಸ್ಮರಣೀಯ. ನಮ್ಮ ತಂದೆಯವರಿಗೆ ವರ್ಗವಾದಾಗ ರೂಯ್ಯಾ ಕಾಲೇಜಿಗೆ ಸೇರಿದೆ. ಅಲ್ಲಿ ಅಂತರ ಕಾಲೇಜು ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದೆ. ಇಮ್ತಿಯಾಜ್ ಖಾನ್ ಹೆಬ್ಬಾರ್ ಖಾನ್ ಆಗಿನಿಂದಲೇ ಪರಿಚಿತರು. ಹಿಂದಿ, ಇಂಗ್ಲಿಷ್, ನಾಟಕದಲ್ಲೂ ಅಭಿನಯಿಸಿದ್ದೇನೆ. ಗುಜರಾಥಿ ಥಿಯೇಟರಿನಲ್ಲಿ ರಂಗದ ಹಿಂದೆ ಕೆಲಸ ಮಾಡಿದ್ದೇನೆ.

ಸದಾ ನಿರ್ದೇಶಕರುಗಳೊಂದಿಗಿದ್ದು ಅವನ್ನು ನೋಡಿ ಕಲಿತೆ. Method Theatreಬಗ್ಗೆ ನನಗೆ ಆಸಕ್ತಿ, Stanslovaski, Brecht ಬಗ್ಗೆ ಓದಿದ ನಾನು ಅವರ Theory practice ಮಾಡಕ್ಕೆ ಪ್ರಯತ್ನಿಸಿದೆ. ಭಾರದ್ವಾಜರ ಒಡನಾಟವೂ ನನ್ನನ್ನು ರೂಪಿಸಿದೆ.

**ಮುಂಬೈನಲ್ಲೀಗ ರಂಗ ಚಟುವಟಿಕೆಗಳ ಬಗ್ಗೆ ನಿಮಗೇನೆನಿಸುತ್ತೆ?**

ಮಹಾರಾಷ್ಟ್ರದಲ್ಲಿ ರಂಗಭೂಮಿ ಮತ್ತ ಕಲೆಗೆ ಇರುವ ಪ್ರೋತ್ಸಾಹ ಬೇರೆಲ್ಲೂ ಇಲ್ಲ. ಹಣಕೊಟ್ಟು ನೋಡೋ ನಾಟಕಗಳೂ house full ಆಗಿ ನಡೆಯುತ್ತೆ, ನಮ್ಮಲ್ಲಿ ಹಣ ಕೊಟ್ಟು ಏನೂ ಮಾಡಲ್ಲ. ಪುಸ್ತಕ ಪ್ರಕಟಿಸುವವರ ಪಾಡೂ ಇದೇ.

**ಹಿಂದಿ-ಮರಾಠಿ -ಗುಜರಾಥಿ - ಇಂಗ್ಲೀಷ್ ರಂಗ ಚಟುವಟಿಕೆಯನ್ನು ಕನ್ನಡ ರಂಗ ಚಟುವಟಿಕೆಯೊಂದಿಗೆ ಹೋಲಿಸಲು ಸಾಧ್ಯವೇ?**

ಇಲ್ಲಿಯ ಕನ್ನಡ ರಂಗ ಚಟುವಟಿಕೆಯಲ್ಲಿ ಬೇರೆ ಭಾಷೆಯ ಚಟುವಟಿಕೆಗಳೊಂದಿಗೆ ಹೋಲಿಸಕ್ಕೆ ಆಗಲ್ಲ. ಒಳ್ಳೇ ನಿರ್ದೇಶಕರು ನಟರು ಇರೋ ಕನ್ನಡ ನಾಟಕಗಳು ಹೆಚ್ಚಿನ ಪ್ರದರ್ಶನ ಕಾಣಲ್ಲ. K.J. Rao, ಸುವರ್ಣ R.D. ಕಾಮತ್, ಕವಲಿಯಂತವರಿದ್ದ ಕಾಲದಲ್ಲಿ ಒಂದೊಂದು ನಾಟಕ 10-15 ಪ್ರದರ್ಶನ ಕಾಣುತ್ತಿತ್ತು, ಜನ ಟಿಕೇಟು ಪಡೆದು ನೋಡ್ತಿದ್ರು. ಈಗ ಹಾಗಿಲ್ಲ. ಕರ್ನಾಟಕ ಸಂಘ, ಮೈಸೂರು ಅಸೋಸಿಯೇಶನ್ ಕಲೆಗೆ ಪ್ರೋತ್ಸಾಹ ಕೊಡುವಂತೆ ಸ್ಪರ್ಧೆ ನಾಟಕೋತ್ಸವ ಏರ್ಪಡಿಸೋದು ಖುಷಿಯ ಸಂಗತಿ. ಮುಂಬೈನಲ್ಲಿಗೇ ಕನ್ನಡಿಗರು ಉದ್ಯೋಗ ಹುಡುಕಿ ಬಂದವರು ಬೇರೆ ಕಡೆ ಅವರ ಗಮನ ಹರಿಯುವುದಿಲ್ಲ.

**ನೀವು ಅಭಿನಯಿಸಿ ಮನದಲ್ಲುಳಿದ ಪಾತ್ರ ಯಾವುದು?**

R.D. ಕಾಮತರ `ಹಿಮಾಚಲದ ಹಿಂದೆ' ಎಂಬ ನಾಟಕದ ಚೀನೀ ಬಟ್ಲರ್ ಪಾತ್ರ. ಕಾಮತರು ನಟನ ನಟನೆಯನ್ನು ನೋಡಿ ಪಾತ್ರ ಹಿಗ್ಗಿಸೋರು. ನನ್ನ ನಟನೆ ನೋಡ್ತಾ ನೋಡ್ತಾ ಪಾತ್ರವೂ ದೊಡ್ಡದಾಯಿತು. ಚೀನೀ ಆಕ್ರಮಣದ ಕಥೆ ಅದು. ಒಬ್ಬ ಬಟ್ಲರ್ ಸೈನಿಕನಾಗಿ ಮುಂದೆ ನಾಯಕನನ್ನೇ ಕೊಲ್ಲುತ್ತಾನೆ. ಚೀನಿ ನಡುವಳಿಕೆಯನ್ನು ಒಬ್ಬ ಚೈನಾದವನೇ ಬಂದು ತೋರಿಸಿಕೊಡುತ್ತಿದ್ದ. ಆ ಪಾತ್ರ ನನ್ನ ನೆನಪಲ್ಲಿನ್ನೂ ಉಳಿದಿದೆ.

**ನಿಮ್ಮ ಮೆಚ್ಚಿನ ನಾಟಕಕಾರರು ಯಾರು?**

ರಂಗನಾಥ್ ಬಾರದ್ವಾಜರು.... (ನಗೆ). ಯಾಕೆಂದ್ರೆ ಹೊಸ ರೀತಿಯ ನಾಟಕ ಬರೆದಿದ್ದಾರೆ. ಅವರು Original thinker

**ಹೊಸ ರೀತಿಯ ನಾಟಕ ಪ್ರಯೋಗಗಳೇನಾದ್ರೂ ಮಾಡಿದ್ದೀರಾ?**

Brecht, Staslovaski,ಭಾರದ್ವಾಜರ technique ಅಳವಡಿಸಿ `ಚಿಪ್ಪಾ ಚಾಪಲ್ಯ'ಎಂಬ ನಾಟಕದ ಪ್ರಯೋಗ ಮಾಡಿದೆ. ನಾನೊಬ್ಬನೇ ನಾಟಕದ ಒಂಬತ್ತು ಪಾತ್ರಗಳನ್ನು ರಂಗದ ಮೇಲೆ ವೇಷ ಬದಲಿಸಿ ನಟಿಸಿದ್ದೆ. ಬೇರೆ ಬೇರೆ ಭಾಷೆಯ ಜನ ಈ ನಾಟಕ ಮೆಚ್ಚಿಕೊಂಡಿದ್ದಾರೆ. ಹೊಸ ರೀತಿಯ ಈ ನಾಟಕ ಪ್ರಯೋಗಕ್ಕೆ `ಅಭಿನಯ ಕಲಾ ಚತುರ' ಎಂಬ ಬಿರುದು ಸಿಕ್ಕಿದೆ.

ಬೆಂಗಳೂರಿನಲ್ಲಿ ನೆಲೆಸಿರುವ ಸುಬ್ರಾಯ ಭಟ್ಟರು ಕರ್ನಾಟಕದ ಶಾಲೆಗಳಲ್ಲಿ ನಾಟಕ ಶಿಬಿರ ನಡೆಸಿ ಮಕ್ಕಳಲ್ಲಿ ಕಲೆಯ ಬಗ್ಗೆ ಅಭಿರುಚಿ ಬೆಳೆಸುವ ಯತ್ನದಲ್ಲೀಗ Busyಯಾಗಿದ್ದಾರೆ. ವ್ಯಕ್ತಿತ್ವದ ಬೆಳವಣಿಗೆಗೆ ನಾಟಕವನ್ನು ಮಾಧ್ಯಮವನ್ನಾಗಿ ಭಟ್ಟರು ಬಳಸಿಕೊಳ್ಳುವ ಸಾಧ್ಯತೆಯ ಬಗ್ಗೆ ಅದಮ್ಯ ಉತ್ಸಾಹದಿಂದ ಮಾತನಾಡಿದರು. ಮಕ್ಕಳ ನಾಟಕ ಕಡಿಮೆ ಇರುವ ನಮ್ಮಲ್ಲಿ ಆ ಬಗ್ಗೆ ಕೆಲಸ ನಡೆಯ ಬೇಕಿದೆ. ಎ.ಎಸ್. ಮೂರ್ತಿ, ಪ್ರೇಮ ಕಾರಂತರ ಈ ಬಗೆಗಿನ ಪ್ರಯತ್ನಗಳನ್ನು ಶ್ಲಾಘಿಸಿದರು.

ಭಟ್ಟರ ಮಾತಿನಲ್ಲಿ ಅಪ್ರಯತ್ನವಾಗಿ ರಂಗನಾಥ ಬಾರಧ್ವಾಜರ ಬಗ್ಗೆ ಅಭಿಮಾನ ಗೌರವಗಳು ಸಂಭಾವಣೆಯ ಉದ್ದಕ್ಕೂ ಸೂಸಿದಿತ್ತು. ಈ ಬಗ್ಗೆ ಒಂದಷ್ಟು ರೇಗಿಸಿ ಮೆಚ್ಚಿಗೆ ಸೂಸಿ Bye Bye ಹೇಳಿ ಹೊರಟೆ. ನಾಟಕದ ತಾಲೀಮಿಗೆ ಭಟ್ಟರು ನಟರಿಗೆ ಕೂಗು ಹಾಕಿ ಸಿದ್ಧಾರಾದರು.

●

# "ಮರಳು - ನೊರೆ"

ಗಿಬ್ರಾನನ ಗೆಳತಿ ಬಾರ್ಬರಾ ಯಂಗ್‌ಗೆ ಒಂದು ಸಲ ಭಾವನೆ ಬಂತಂತೆ ಗಿಬ್ರಾನನ ಆರಿಸಿದ ಅಪರೂಪದ ಮಾತುಗಳನ್ನು ಒಂದು ಕಡೆ ಬರೆದಿಡಬೇಕು ಎಂದು. ಅವನ ಚಿತ್ರಶಾಲೆಯಲ್ಲಿ ಅವನ ಜೊತೆ ಮಾತಾಡುತ್ತಾ ಇರುವಾಗ ಹಾಗೆ ಅನೇಕ ಮಾತುಕತೆಗಳನ್ನು ಬರೆದುಕೊಂಡು ಅಲ್ಲಿ ಇಲ್ಲಿ ಆಕೆ ಇಟ್ಟಳು. ಗಿಬ್ರಾನ್ ಮೊದಲಿಗೆ ಅದನ್ನು ಹಾಸ್ಯ ಮಾಡಿದ. ಹೇಳಿದ ``ಅವೆಲ್ಲ ಅಷ್ಟು ಮರಳು-ನೊರೆ ಅಷ್ಟೆ". ಬಾರ್ಬರಾಳಿಗೆ ಅದೇ ಪುಸ್ತಕಕ್ಕೆ ಹೆಸರೂ ಆಯಿತು ಮರಳು-ನೊರೆ (Sand and Foam) ಸ್ವಲ್ಪ ಸಮಯ ಕಳೆದ ಮೇಲೆ ಅವನಿಗೂ ಅದರಲ್ಲಿ ಆಸಕ್ತಿ ಹುಟ್ಟುತ್ತಾ ಹೋಯಿತು. ಯಾವುದೋ ರಂಗಶಾಲೆಯ ಕಾರ್ಯಕ್ರಮದ ಚೀಟಿಯ ಹಿಂದೆ, ಸಿಗರೇಟ್ ಪೆಟ್ಟಿಗೆಯ ತುದಿಯ ಕಾರ್ಡ್‌ಬೋರ್ಡ್‌ನ ಮೇಲೆ ಹರಿದ ಲಕ್ಕೋಟೆಗಳ ಮೇಲೆ ಏನನ್ನೆಲ್ಲ ಬರೆದುಕೊಟ್ಟು ಹೇಳುತ್ತಿದ್ದ. ``ಇದೋ ಬುದ್ಧಿಯಿಲ್ಲದೆ ನೀನು ಒಟ್ಟುಗೂಡಿಸುತ್ತಿರುವ ಮರಳು-ನೊರೆ". ಅವನಿಗೆ ಅದರಲ್ಲಿ ಸಂತೋಷ ಉಂಟಾಗುತ್ತಿತ್ತು. ಪಂಕ್ತಿಗಳನ್ನು ಅತ್ಯಂತ ಶಕ್ತಿ ಪೂರ್ಣವಾದ ಪಂಕ್ತಿಗಳನ್ನು ಬರೆಯುತ್ತಾ ಹೋದ. ಅವುಗಳು ಈ ಪುಸ್ತಕದಲ್ಲಿವೆ. ಒಂದು ದಿನಾ ಆತ ಬಾರ್ಬರಾಳಿಗೆ ಹೇಳಿದ: ``ದಯವಿಟ್ಟು ಇದನ್ನು ಬರೆದುಕೋ - ಆದರೆ ನೆನಪಿರಲಿ, ಆ ಪುಸ್ತಕದಲ್ಲಿ ಇದೇ ಕೊನೆಯ ಮಾತಾಗಿರಬೇಕು: ``ಉಕ್ತಿಯಲ್ಲಿ ನಾವು ಬಂಧಿಸಿರುವ ಪ್ರತಿಯೊಂದು ಚಿಂತನೆಯನ್ನೂ ಕೃತಿಯಲ್ಲಿ ನಾವು ಬಿಡುಗಡೆ ಮಾಡಬೇಕು."

ಮೊದಲನೆಯ ಉಕ್ತಿ ಇದು:

ಈ ತೀರಗಳಲ್ಲಿ ನಾನು ಎಂದೆಂದೂ ನಡೆಯುತ್ತಲೇ ಇದ್ದೇನೆ,
ಮರಳು ಮತ್ತು ನೊರೆಗಳ ನಡುವೆ,
ಉಬ್ಬರದಲೆಗಳು ನನ್ನ ಕಾಲುಗುರುತುಗಳನ್ನು ಅಳಿಸುತ್ತವೆ,
ಗಾಳಿ ನೊರೆಯನ್ನು ಹಾರಿಸಿಕೊಂಡು ಹೋಗುತ್ತದೆ.
ಆದರೆ ಕಡಲು ತೀರವೂ
ಎಂದೆಂದೂ ಇರುತ್ತವೆ.

ಗಿಬ್ರಾನ್ ಸದಾಅನಂತತೆಯ ಭಾವನೆಯಲ್ಲಿ ಬಾಳುತ್ತಿದ್ದ ಎಂದು ನನ್ನ ಕಲ್ಪನೆ. ಇದು ಬರಿಯ ಊಹೆಯಲ್ಲ. ಅವನ ಬರೆಹದ ಅನೇಕ ಪಂಕ್ತಿಗಳು ನನ್ನ ಕಲ್ಪನೆಯನ್ನು ಪುಷ್ಟೀಗೊಳಿಸುತ್ತಿವೆ. ತೀವ್ರವಾದ ಆಧ್ಯಾತ್ಮಿಕ ಅನುಭವವಿಲ್ಲದವನು ಹೇಳಲಾರದ, ಬರಿಯ ಬುದ್ಧಿಯ ಮಟ್ಟದಲ್ಲಿ ಕಲ್ಪಿಸಿ ಕೊಳ್ಳಲಾರದ ಅನೇಕ ಮಾತುಗಳನ್ನು ಗಿಬ್ರಾನ್ ಹೇಳಿದ್ದಾನೆ.

ಗಿಬ್ರಾನ್, ಅನ್ನುತ್ತಾನೆ: ``ತಮ್ಮ ಎಚ್ಚರದ ಸ್ಥಿತಿಯಲ್ಲಿ ಅನೇಕರು ಹೇಳುತ್ತಾರೆ `ನೀನೂ ನೀನು ವಾಸಿಸುತ್ತಿರುವ ಜಗತ್ತೂ ಅನಂತ ಸಾಗರದ ಅನಂತ ತೀರದ ಮರಳಿನ ಒಂದು ಕಣ ಮಾತ್ರ. ನನ್ನ ಕನಸಿನಲ್ಲಿ ನಾನು ಅವರಿಗೆ ಹೇಳುತ್ತೇನೆ, ನಾನು ಅನಂತ ಸಾಗರ, ಎಲ್ಲ ಜಗತ್ತುಗಳೂ ನನ್ನ ತೀರದಲ್ಲಿ ಮರಳ ಕಣಗಳು."

ಮಾತನಾಡುತ್ತಲೇ ಇರುವ ಕವಿ, ಮನುಷ್ಯ ಒಮ್ಮೆ ಮಾತ್ರ ಮೂಕನಾದನಂತೆ, ಅದು ಯಾರೋ ಅವನನ್ನು ಈ ಪ್ರಶ್ನೆ ಕೇಳಿದಾಗ: ``ನೀನು ಯಾರು?"

ನಾವು ಕುಳಿತು ದೀರ್ಘಕಾಲ ಚಿಂತಿಸಬಹುದಾದ ಅನೇಕ ವಾಕ್ಯಗಳುಂಟು ಇಲ್ಲಿ. ನಿದರ್ಶನಕ್ಕೆಂದು ಕೆಲವನ್ನು ಮಾತ್ರ ನೋಡಬಹುದು.

ಒಂದು ಮರಳ ಕಣದ ಸುತ್ತ ನೋವಿನಿಂದ ಕಟ್ಟಿದ ದೇಗುಲ, ಮುತ್ತು.

ನೆನಪು ಸಮಾಗಮದ ಒಂದು ರೂಪ,
ಮರವೆ ಸ್ವಾತಂತ್ರ್ಯದ ಒಂದು ರೂಪ.

ಮಾನವತೆ, ಮೂಜಿ ಅನಂತತೆಯಿಂದ ಅನಂತತೆಯವರೆಗೆ ಹರಿಯುತ್ತಿರುವ ಬೆಳಕಿನ ನದಿ. ನಮ್ಮ ಮನಸ್ಸು ಒಂದು ಸ್ಪಂಜು; ನಮ್ಮ ಹೃದಯ ಒಂದು ಹೊನಲು.

ಮೌನ ನಮ್ಮಲ್ಲಿನ ನೈಜಗುಣ: ವಾಚಾಳಿತನ ನಾವು ಪಡೆದು ಕೊಂಡದ್ದು.

ಪ್ರತಿಯೊಂದು ಬೀಜವೂ ಒಂದು ಬಯಕೆ.

ಅವರು ತಮ್ಮ ಲೇಖನಿಗಳನ್ನು ಅದ್ದುತ್ತಾರೆ ನಮ್ಮ ಹೃದಯಗಳಲ್ಲಿ, ಭಾವಿಸುತ್ತಾರೆ, ತಾವು ಸ್ಫೂರ್ತಿ ಪಡೆದಿದ್ದೇವೆ.

ಸ್ಫೂರ್ತಿ ಯಾವಾಗಲೂ ಹಾಡುತ್ತದೆ: ಸ್ಫೂರ್ತಿ ಎಂದು ವಿವರಿಸುವುದಿಲ್ಲ.

ನಾವು ಅನೇಕ ಸಲ ನಮ್ಮ ಮಕ್ಕಳಿಗೆ ಜೋಗುಳ ಹಾಡುತ್ತೇವೆ, ನಾವೇ ಮಲಗಲೆಂದು.

ನಮ್ಮ ಮೌನಗಳನ್ನು ಹಾಡುವವನೇ ಮಹಾ ಗಾಯಕ.

ಅತಿಥಿಗಳಿಲ್ಲದಿದ್ದರೆ ಎಲ್ಲ ಮನೆಗಳೂ ಗೋರಿಗಳಾಗುತ್ತಿದ್ದುವು.

ನಿನ್ನ ಹೃದಯ ಜ್ವಾಲಾಮುಖಿಯಾಗಿದ್ದರೆ ನಿನ್ನ ಅಂಗೈಯಲ್ಲಿ ಹೂವುಗಳು ಅರಳಲಿ ಎಂದು ನಿರೀಕ್ಷಿಸುವುದು ಹೇಗೆ?

ಬೇರು, ಕೀರ್ತಿಯನ್ನು ನಿರ್ಲಕ್ಷಿಸಿದ ಹೂವು.

ಮೊಲಗಳಿಗಿಂತ ಹೆಚ್ಚಾಗಿ ಆಮೆಗಳು ರಸ್ತೆಗಳ ವಿಷಯ ಹೇಳಬಲ್ಲವು.

ಕಾಯುವುದು ಕಾಲದ ಗೊರಸು.

ಕಲೆ ಪ್ರಕೃತಿ ಅನಂತದತ್ತ ಇಟ್ಟ ಒಂದು ಹೆಜ್ಜೆ.

ರಾತ್ರಿಯ ಪಥಕ ಮೂಲಕ ಅಲ್ಲದೆ ಮುಂಜಾವನ್ನು ಮುಟ್ಟಲಾಗದು.

ಇವು ಒಂದು ವಾಕ್ಯದಲ್ಲಿ ಬಂದು ಮಡುಗಟ್ಟಿ ನಿಂತ ಚಿಂತನೆಯ ಮಾತಾಯಿತು. ಹಾಗೆಯೇ ಅನೇಕ ವಾಕ್ಯಗಳಲ್ಲಿ ಹರಿದಿರುವುದೂ ಉಂಟು.

ದೇವರು ಒಂದು ಹರಳಾದ ನನ್ನನ್ನು ಈ ಆಶ್ಚರ್ಯದ ಸರಸ್ಸಿಗೆ ಎಸೆದಾಗ ಅದರ ಮೇಲ್ಭಾಗವನ್ನು ನಾನು ಲೆಕ್ಕವಿಲ್ಲದಷ್ಟು ಸುತ್ತುಗಳಾಗಿ ಕಲಕಿದೆ. ಆದರೆ ಆಳವನ್ನು ಸೇರಿದಾಗ ನಿಶ್ಚಲನಾದೆ.

* * *

ಸ್ವರ್ಗ ಅಲ್ಲೇ ಇದೆ, ಆ ಬಾಗಿಲ ಹಿಂದೆಯೇ,
ಪಕ್ಕದ ಕೋಣೆಯಲ್ಲೇ;
ಆದರೆ ನಾನು ಕೀಲಿಯನ್ನು
ಕಳೆದುಕೊಂಡಿದ್ದೇನೆ.
ಬಹುಶಃ ಮರೆತು ಎಲ್ಲೋ ಇಟ್ಟು ಬಿಟ್ಟಿದ್ದೇನೆ.

* * *

ಇನ್ನೊಬ್ಬ ವ್ಯಕ್ತಿಯ ನಿಜ ಸ್ವರೂಪ ಯಾವುದು ಗೊತ್ತೇ. ಅವನು ಯಾವುದನ್ನು ನಿನಗೆ ತೋರಿಸುತ್ತಾನೋ ಅದಲ್ಲ. ಅವನು ಯಾವುದನ್ನು ನಿನಗೆ ತೋರಿಸಲಾರನೋ ಅದು.

ಆದ್ದರಿಂದ ನೀನು ಅವನನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಅವನು ಏನು ಹೇಳುತ್ತಾನೋ ಅದನ್ನು ಕೇಳಬೇಡ, ಅವನು ಏನು ಹೇಳುವುದಿಲ್ಲವೋ ಅದನ್ನು ಕೇಳು.

* * *

ಇಬ್ಬರು ಹೆಂಗಸರು ಮಾತನಾಡುವಾಗ ಅವರು ಹೇಳುವುದು ಏನೂ ಇಲ್ಲ; ಆದರೆ ಒಬ್ಬಳು ಮಾತನಾಡುವಾಗ ಅವಳು ಬದುಕಿನ ಸಮಸ್ತವನ್ನು ತೆರೆದು ತೋರಿಸುತ್ತಾಳೆ.

* * *

ಮಾಗಿ ತನ್ನ ಹೃದಯದಲ್ಲಿ ವಸಂತವಿದೆ ಎಂದರೆ ಯಾರು ತಾನೆ ಅದನ್ನು ನಂಬುತ್ತಾರೆ?

ಸತ್ಯವನ್ನು ಕಂಡು ಹಿಡಿಯುವುದಕ್ಕೆ ಇಬ್ಬರು ಬೇಕು: ಒಬ್ಬ ಅದನ್ನು ಹೇಳುವುದಕ್ಕೆ, ಮತ್ತೊಬ್ಬ ಅದನ್ನು ಅರ್ಥ ಮಾಡಿಕೊಳ್ಳುವುದಕ್ಕೆ.

* * *

ಅನೇಕ ಸಿದ್ಧಾಂತಗಳು ಕಿಟಕಿಯ ಹಾಜಿನಂತೆ. ಅವುಗಳ ಮೂಲಕ ಸತ್ಯವನ್ನು ನೋಡಬಹುದು. ಆದರೆ ಸತ್ಯಕ್ಕೂ ನಮಗೂ ನಡುವೆ ಅವು ಇವೆ.

* * *

ಮರಗಳು, ಭೂಮಿ ಆಕಾಶದಲ್ಲಿ ಬರೆಯುವ ಕವನಗಳು. ನಾವು ಅವುಗಳನ್ನು ಕತ್ತರಿಸಿ ಕಾಗದ ಮಾಡುತ್ತೇವೆ, ನಮ್ಮ ಪೊಳ್ಳುತನವನ್ನು ದಾಖಲು ಮಾಡುವುದಕ್ಕೆ.

* * *

ನೀವು ಬರೆಯಲೇ ಬೇಕೆ (ಏಕೋ ಅದು ದೇವರಿಗೇ ಗೊತ್ತು!) ಹಾಗಿದ್ದರೆ ನಿಮಗೆ ಜ್ಞಾನ, ಕಲೆ ಮತ್ತು ಮೋಡಿ ಇರಲೇಬೇಕು - ಪದಗಳ ಸಂಗೀತದ ಜ್ಞಾನ, ನಿಷ್ಕಪಟವಾಗಿರಬಲ್ಲ ಕಲೆ, ನಿಮ್ಮ ಓದುಗರನ್ನು ಪ್ರೀತಿಸುವ ಮೋಡಿ ಇವು ಇರಲೇ ಬೇಕು.

* * *

ಕಾವ್ಯ ಒಂದು ಅಭಿಪ್ರಾಯದ ಅಭಿವ್ಯಕ್ತಿ ಅಲ್ಲ. ರಕ್ತ ಸುರಿಯುತ್ತಿರುವ ಗಾಯದಿಂದ ಇಲ್ಲವೇ ಮುಗುಳ್ನಗುತ್ತಿರುವ ಬಾಯಿಂದ ಹೊಮ್ಮಿದ ಗಾನ ಅದು.

* * *

ಪದಗಳು ಕಾಲ ರಹಿತ. ಅವುಗಳನ್ನು ಹೇಳುವಾಗ, ಬರೆಯುವಾಗ ಅವುಗಳು ಕಾಲರಹಿತ ಎಂಬುದನ್ನು ತಿಳಿದು ಹೇಳಬೇಕು, ಬರೆಯಬೇಕು.

* * *

ಕಾವ್ಯ ಆನಂದ, ನೋವು, ಆಶ್ಚರ್ಯ ಇವುಗಳ ವ್ಯವಹಾರ ನಿಘಂಟಿನ ರಭಸದೊಂದಿಗೆ.

* * *

ತನ್ನ ಹೃದಯದ ಹಾಡಿನ ತಾಯಿಯನ್ನು ಕವಿ ಹುಡುಕುತ್ತಾನೆ ವ್ಯರ್ಥವಾಗಿ.

* * *

ಕಾವ್ಯ ಹೃದಯವನ್ನು ಮೋಹಕಗೊಳಿಸುವ ತಿಳಿವು. ತಿಳಿವು ಮನಸ್ಸಿನಲ್ಲಿ ಹಾಡುವ ಕಾವ್ಯ. ನಾವು ಮಾನವನ ಹೃದಯವನ್ನು ಮೋಹಿಸಿ ಏಕಕಾಲದಲ್ಲಿ ಅವನ ಮನಸ್ಸಿನಲ್ಲಿ ಹಾಡಬಲ್ಲವಾದರೆ, ಆಗ ವಾಸ್ತವವಾಗಿ ನಾವು ಭಗವಂತನ ನೆರಳಿನಲ್ಲಿ ಬಾಳುತ್ತೇವೆ.

* * *

ಹುಚ್ಚ ನಿನಗಿಂತ ಅಥವಾ ನನಗಿಂತ ಕಡಿಮೆ ರೀತಿಯ ಸಂಗೀತಗಾರನಲ್ಲ. ಇಷ್ಟೇ, ಆತ ನುಡಿಸುತ್ತಿರುವ ವಾದ್ಯ ಶ್ರುತಿ ತಪ್ಪಿದೆ.

ನನ್ನ ಇನ್ನೊಂದು ಚೇತನ ಜತೆ ಎಂದೂ ನನಗೆ ಪೂರ್ಣವಾದ ಒಪ್ಪಂದವಾಗಲೇ ಇಲ್ಲ. ವಿಷಯದ ಸತ್ಯ ನಮ್ಮಿಬ್ಬರ ನಡುವೆ ಇರುವಂತಿದೆ.

* * *

ಪ್ರತಿಯೊಬ್ಬರೂ ಇಬ್ಬರು ಸ್ತ್ರೀಯರನ್ನು ಪ್ರೀತಿಸುತ್ತಾನೆ: ಒಬ್ಬಳು ಅವನ ಕಲ್ಪನೆಯ ಸೃಷ್ಟಿ, ಇನ್ನೊಬ್ಬಳು ಹುಟ್ಟೇ ಇಲ್ಲ.

* * *

ಸ್ತ್ರೀಯರ ಸಣ್ಣ ತಪ್ಪುಗಳನ್ನು ಮನ್ನಿಸಲಾರದವರು ಅವರ ಹಿರಿಯ ಸದ್ಗುಣಗಳನ್ನು ಎಂದೂ ಸವಿ ನೋಡಲಾರರು.

* * *

ಭಾಷೆಯನ್ನು ಕೇವಲ ಏಳೇ ಪದಗಳಿಗೆ ಇಳಿಸದಿದ್ದರೆ ನಾವು ಪರಸ್ಪರರನ್ನು ಅರ್ಥ ಮಾಡಿಕೊಳ್ಳುವುದೇ ಇಲ್ಲ.

ಇಲ್ಲಿ ಒಂದು ವಿವರಣೆ ಅಗತ್ಯ. ಅದು ಮೇಲೆ ಹೇಳಿದ ಏಳು ಪದಗಳ ಬಗೆಗೆ. ಬಾರ್ಬರಾ ಯಂಗ್ ಒಂದು ದಿನ ಗಿಬ್ರಾನನ ಕಲಾ ಶಾಲೆಯಲ್ಲಿದ್ದಾಗ ಗಿಬ್ರಾನ್ ಕೇಳಿದ: ``ಒಂದು ವೇಳೆ ನಿನಗೆ ಗೊತ್ತಿರುವ ಎಲ್ಲ ಪದಗಳನ್ನೂ ಏಳು ಹೊರತು, ಮರೆತು ಬಿಡಬೇಕು ಎಂದು ಯಾರಾದರೂ ಬಲಾತ್ಕರಿಸಿದರೆ ನೀನು ಉಳಿಸಿಕೊಳ್ಳುವ ಏಳು ಪದಗಳು ಯಾವುವು?" ಅಷ್ಟೇನು ಹಿಂದು ಮುಂದು ನೋಡದೆ ಯಂಗ್ ಹೇಳಿದಳು: ``ದೇವರು, ಬದುಕು, ಪ್ರೇಮ, ಸೌಂದರ್ಯ, ಭೂಮಿ". ಇನ್ನೆರಡು ಪದ ಆಕೆಗೆ ಹೊಳೆಯಲಿಲ್ಲ. ಆಕೆ ಗಿಬ್ರಾನನನ್ನೇ ಕೇಳಿದಳು.

``ಎಲ್ಲಕ್ಕಿಂತ ಮುಖ್ಯವಾದ ಎರಡು ಪದಗಳನ್ನೇ ನೀನು ಮರೆತು ಬಿಟ್ಟಿದ್ದೀಯೆ" ಎಂದ ಗಿಬ್ರಾನ್. ಆಕೆಗೆ ಆಶ್ಚರ್ಯವಾಯಿತು. ಮುಂದುವರಿದು ಆತ ಹೇಳಿದ: ``ಅವಿಲ್ಲದೆ ಉಳಿದದ್ದೆಲ್ಲ ನಿರ್ವೀರ್ಯ. ಅವು `ನೀನು-ನಾನು' ಇವೆರಡಲ್ಲದೆ ಬೇರೆ ಯಾವುದೂ ಬೇಕಿಲ್ಲ. ನಾವು ಇರಬೇಕು. ನಾವು ತೆಗೆದುಕೊಳ್ಳಬೇಕು." ಅನಂತರ ಆತ ನಿಧಾನವಾಗಿ, ಆದರೆ ಉಸಿರು ಬಿಡದೆ ಹೇಳಿದ. ``ನನ್ನ ಏಳು ಪದಗಳು ಇವು: ನೀನು, ನಾನು, ತೆಗೆದುಕೊ, ದೇವರು, ಪ್ರೇಮ, ಸೌಂದರ್ಯ, ಭೂಮಿ."

ಬದುಕಿನ ಎಲ್ಲವೂ, ಬದುಕಿನ ಭಾಗ, ಅನಂತತೆ, ಭಗವಂತ ಎಲ್ಲ ಇಲ್ಲಿವೆ. ಒಂದು ದೀರ್ಘ ರೋಮಾಂಚಕಾರಕ ಮೌನದ ನಂತರ ಇಬ್ಬರೂ ಸೇರಿ ಈ ಏಳೂ ಪದಗಳಿರುವಂತೆ ಒಂದು ಪದ್ಯ ಮಾಡಿದರು - ಒಂದೇ ವ್ಯತ್ಯಾಸದೊಂದಿಗೆ, ನಾನು ಎಂಬುದು ನನ್ನನ್ನು ಎಂದಾಗಿ.

ಪ್ರೇಮವೇ, ನನ್ನನ್ನು ತೆಗೆದುಕೋ,
ಸೌಂದರ್ಯ, ನನ್ನನ್ನು ತೆಗೆದುಕೋ,
ತೆಗೆದುಕೋ ನನ್ನನ್ನು ಓ ಭೂಮಿ,
ನಾನು ನಿನ್ನನ್ನು ತೆಗೆದುಕೊಳ್ಳುತ್ತೇನೆ.
ಪ್ರೇಮ, ಭೂಮಿ, ಸೌಂದರ್ಯ
ನಾನು ತೆಗೆದುಕೊಳ್ಳುತ್ತೇನೆ,
ಭಗವಂತ.

* * *

ಇದು ಅಂಥ ಕೆಟ್ಟ ಸೆರೆಮನೆಯೇನೂ ಅಲ್ಲ. ಆದರೆ ನನ್ನ ಕೋಣೆಗೂ ಪಕ್ಕದ ಖೈದಿಯ ಕೋಣೆಗೂ ನಡುವೆ ಇರುವ ಗೋಡೆ ನನಗೆ ಹಿಡಿಸುವುದಿಲ್ಲ. ಆದರೂ, ನಿನಗೆ ಭರವಸೆ ಕೊಡುತ್ತೇನೆ, ನಾನು ಜೈಲಿನ ಅಧಿಕಾರಿಯನ್ನಾಗಲೀ, ಇದನ್ನು ಕಟ್ಟಿದವನನ್ನಾಗಲೀ ದೂಷಿಸುವುದಿಲ್ಲ.

* * *

ನೀನು ಮೀನು ಕೇಳಿದೆ. ಅವರು ಹಾವು ಕೊಟ್ಟರು. ಅವರ ಬಳಿ ಹಾವಲ್ಲದೆ ಬೇರೆ ಏನೂ ಇರಲಿಲ್ಲವಲ್ಲ, ಆದ್ದರಿಂದ ಅದೂ ಅವರ ಔದಾರ್ಯವೆಂದೇ ಹೇಳಬೇಕು.

ಇಲ್ಲಿ ರಾಮಕೃಷ್ಣ ಪರಮಹಂಸರ ಒಂದು ಮಾತು ನೆನಪಿಗೆ ಬರುತ್ತಿದೆ. ಕೃಷ್ಣ ಕಾಳೀಯನನ್ನು ತುಳಿದಾಗ ಆತ ವಿಷವನ್ನು ವಮನ ಮಾಡಿದ. ಕಾಳೀಯ ಕೃಷ್ಣನಿಗೆ ಹೇಳಿದ: ``ಪ್ರಭೂ, ನನ್ನ ಬಳಿ ವಿಷ ಅಲ್ಲದೆ ಬೇರೆ ಏನೂ ಇಲ್ಲ. ನೀನು ನನಗೆ ಕೊಟ್ಟಿದ್ದೇ ಅದು!"

* * *

ಒಳಿತು-ಕೆಡುಕುಗಳನ್ನು ಬೇರ್ಪಡಿಸುವುದು ಯಾವುದೋ ಅದರ ಮೇಲೆ ತನ್ನ ಬೆರಳನ್ನು ಇಡಬಲ್ಲವನು ಭಗವಂತನ ಬಟ್ಟೆಯ ಅಂಚನ್ನೇ ಮುಟ್ಟಬಲ್ಲ.

* * *

ತುಂಬ ಪ್ರೀತಿಸುತ್ತಿದ್ದುದಕ್ಕೆ, ತುಂಬ ಪ್ರೀತಿ ಪಾತ್ರನಾಗಿದ್ದುದಕ್ಕೆ ಒಬ್ಬನನ್ನು ಬಹಳ ಹಿಂದೆ ಶಿಲುಬೆಗೇರಿಸಿದರು.

ಹೇಳುವುದಕ್ಕೆ ವಿಚಿತ್ರವೆನಿಸುತ್ತದೆ, ನಾನು ಅವನನ್ನು ನಿನ್ನೆ ಮೂರು ಸಲ ಭೇಟಿ ಮಾಡಿದೆ.

ಮೊದಲ ಸಲ ಅವನು ಒಬ್ಬ ಪೋಲೀಸಿನವನಿಗೆ ಹೇಳುತ್ತಿದ್ದ: ಆ ವೇಶ್ಯೆಯನ್ನು ಸೆರೆಮನೆಗೆ ಒಯ್ಯಬೇಡ ಎಂದು. ಎರಡನೆ ಸಲ ಆತ ಒಬ್ಬ ಬಹಿಷ್ಕಾರ ಹೊಂದಿದ ವ್ಯಕ್ತಿಯೊಂದಿಗೆ ವೈನ್ ಕುಡಿಯುತ್ತಿದ್ದ. ಮೂರನೆಯ ಸಲ ಆತ ಚರ್ಚಿನಲ್ಲಿ ಧರ್ಮಪ್ರವರ್ತಕನೊಂದಿಗೆ ಮುಷ್ಟಿ ಯುದ್ಧದಲ್ಲಿ ತೊಡಗಿದ್ದ.

* * *

ಬದುಕು ಒಂದು ಮೆರವಣಿಗೆ, ನಿಧಾನವಾಗಿ

ಹೆಜ್ಜೆ ಹಾಕುವವನು ಇದರ ವೇಗ ತುಂಬ ಹೆಚ್ಚು ಎಂದು ಅದರಿಂದ ಹೊರಕ್ಕೆ ಬಂದು ಬಿಡುತ್ತಾನೆ. ವೇಗವಾಗಿ ಹೆಜ್ಜೆ ಹಾಕುವವನು ಇದರ ವೇಗ ತೀರ ಕಡಿಮೆ ಎಂದು ಅದರಿಂದ ಹೊರಕ್ಕೆ ಬಂದು ಬಿಡುತ್ತಾನೆ.

* * *

ಏಕಾಂತತೆ ಎಂಬುದು ನಿಶ್ಶಬ್ದವಾದ ಬಿರುಗಾಳಿ. ಅದು ನಮ್ಮ ಎಲ್ಲ ಸತ್ತ ರೆಂಬೆಗಳನ್ನೂ ಕತ್ತರಿಸಿ ಉರುಳಿಸುತ್ತದೆ. ಆದರೆ ಅದು ನಮ್ಮ ಜೀವಂತ ಬೇರುಗಳನ್ನು ಜೀವಂತ ಪೃಥ್ವಿಯ ಜೀವಂತ ಹೃದಯಕ್ಕೆ ಇನ್ನೂ ಆಳವಾಗಿ ಕಳುಹಿಸುತ್ತದೆ.

* * *

ಒಮ್ಮೆ ಒಬ್ಬ ತತ್ವ ಶಾಸ್ತ್ರಜ್ಞ ಬೀದಿ ಗುಡಿಸುವವನನ್ನು ನೋಡಿ ಹೇಳಿದ: ``ನಿನ್ನನ್ನು ನೋಡಿದರೆ ನನಗೆ ಕನಿಕರವಾಗುತ್ತದೆ. ನಿನ್ನ ಕೆಲಸ ಕಷ್ಟ, ಕೊಳಕು.''

ಗುಡಿಸುವವನು ಹೇಳಿದ: ``ಉಪಕಾರವಾಯಿತು. ಆದರೆ ಹೇಳಿ, ನಿಮ್ಮ ಕೆಲಸ ಏನು?''

ತತ್ವ ಶಾಸ್ತ್ರಜ್ಞ: ``ನಾನು ಮನುಷ್ಯನ ಮನಸ್ಸು, ಕೃತಿ, ಆಸೆ ಇವುಗಳನ್ನು ಅಧ್ಯಯನ ಮಾಡುತ್ತೇನೆ.''

ಗುಡಿಸುವವನು ಗುಡಿಸುತ್ತಾ ಮುಗುಳ್ನಕ್ಕು ಹೇಳಿದ: ``ಅಯ್ಯೋ ಪಾಪ. ನಿಮ್ಮನ್ನು ನೋಡಿದರೆ ನನಗೂ ಕನಿಕರವಾಗುತ್ತದೆ.''

ಈ ಪುಸ್ತಕವನ್ನು ಕುರಿತು ವಿಮರ್ಶೆಯಲ್ಲಿ ಈ ಮಾತುಗಳಿವೆ: ``ಪುಸ್ತಕದ ರಕ್ಷಾ ಕವಚ ಹೇಳುತ್ತಿದೆ. ಕೃತಿಕಾರ ತನ್ನ ಕಿಟಕಿಯ ಬಳಿ ಕುಳಿತು ಕೆಳಗೆ ಚಲಿಸುತ್ತಿರುವ ದೃಶ್ಯಗಳನ್ನು ಕುರಿತು ವ್ಯಾಖ್ಯಾನ ಮಾಡುತ್ತಿರುವ ತತ್ವ ಶಾಸ್ತ್ರಜ್ಞ'' ಎಂದು. ಪದಗುಚ್ಛವೇನೋ ಸೊಗಸಾಗಿದೆ, ಆದರೆ ಲೇಖಕನೇ ಹೇಳಿದ: ``ನಡೆಯುವವರೆಲ್ಲರೊಂದಿಗೆ ನಾನೂ ನಡೆಯುತ್ತೇನೆ. ಮೆರವಣಿಗೆ ಹಾದು ಹೋಗುವುದನ್ನು ನಾನು ಸುಮ್ಮನೆ ನಿಂತು ನೋಡಲಾರೆ.'' ಇಲ್ಲಿರುವ ಮಾತುಗಳು ಬದುಕಿನ ನಾಡಿಯ ಮೇಲೆ ಕೈ ಇಟ್ಟಿರುವವನು, ಬದುಕಿನ ರೊಟ್ಟಿಯನ್ನು ತಿಂದವನು, ಬದುಕಿನ ಬಟ್ಟಲಿನಿಂದ ಕುಡಿದವನು ಬರೆದವು, ಸುಮ್ಮನೆ ಸಾಕ್ಷಿಯಾಗಿ ನೋಡಿದವನು ಬರೆದದ್ದಲ್ಲ. ಶಿಲ್ಪಿಯ ಕಲೆ ಇಲ್ಲಿದೆ. ಇದನ್ನು ಓದುತ್ತಿದ್ದರೆ ಎರಡೂ ಕಣಿ ಹಾಲುಗಲ್ಲಿನಲ್ಲಿ, ಸರಳ ಸತ್ಯಗಳನ್ನು ಕೆತ್ತಿದ ವಿಶಾಲವೂ ಉನ್ನತವೂ ಆದ ನಡುವೆಯಲ್ಲಿ ನಡೆಯುತ್ತಿರುವ ಭಾವನೆ ಬರುತ್ತದೆ.

(ಕೃಪೆ: ಖಲೀಲ್ ಗಿಬ್ರಾನ್''

(ಅನುವಾದ ಪ್ರಭುಶಂಕರ)

# ಕಾರಂತ ಕಂಡ ದೇವರು

● ಗಣೇಶ ಕಿರಾಡಿ, ಮುಂಬಯಿ

ದೇವರು ಇದ್ದಾನೋ ಇಲ್ಲವೋ? ಎಂಬ ಪ್ರಶ್ನೆಗೆ ಉತ್ತರಿಸುವುದು ಸುಲಭದ ಮಾತೇನಲ್ಲ. ಇದ್ದಾನೆ ಎಂದದ್ದಾದರೆ ಎಲ್ಲಿ ಯಾವ ರೂಪದಲ್ಲಿದ್ದಾನೆ? ಅವನ ಸ್ವರೂಪ ಎಂಥದ್ದು? ಮನುಷ್ಯನ ಹಾಗೇ ಇದ್ದಾನೆಯೇ ಎಂಬ ಸಾವಿರಾರು ಪ್ರಶ್ನೆಗಳು ಮನದಾಳದಲ್ಲಿ ಹಣಕಿ ಹಾಕುತ್ತವೆ. ಇಲ್ಲ ಎಂದರೆ ಅಲ್ಲೂ ತಾಪತ್ರಯವಿದೆ. ಯಾಕಿಲ್ಲ? ಶತ ಶತಮಾನಗಳಿಂದ ಕೋಟ್ಯಾನು ಕೋಟಿ ಜನ ನಂಬಿ ನೆಚ್ಚಿ ಕರೆದಿಲ್ಲವೆ? ಎಂದಿರೂ ಕರೆಯುತ್ತಿಲ್ಲವೆ? ಅವರೆಲ್ಲ ಮೂರ್ಖರೆ? ಅವರಿಗೆ ಬೇರೆ ಕೆಲಸವಿಲ್ಲವೆ? ಈ ರೀತಿಯ ಜಿಜ್ಞಾಸೆ ಎರಡು ಪಂಥವನ್ನು ಸೃಷ್ಟಿಸಿತು. ಒಂದು ಆಸ್ತಿಕ ಇನ್ನೊಂದು ನಾಸ್ತಿಕ ಎಂಬುದಾಗಿ. ನಿಜವಾಗಿ ಹೇಳಬೇಕೆಂದರೆ ಈ ಇತ್ತಂಡಗಳಿಂದಾಗಿ ದೇವರು ಇಂದಿಗೂ ರಿಲೆವೆಂಟ್ ಆಗಿ ಬಿಟ್ಟಿದ್ದಾನೆ.

ಈ ಲೇಖನದ ಶಿರೋನಾಮೆ ನೋಡಿ ನಿಮಗೂ ಮುಜುಗರ ಉಂಟಾಗಬಹುದು. `ಕಾರಂತ ಮತ್ತು ದೇವರು' ಎಂಬ ಈ ವಿಷಯವೇ ಅಷ್ಟು ಸರಿ ಇಲ್ಲ ಎಂದು ನೀವು ಅಂದುಕೊಳ್ಳಬಹುದು. ತೀರಾ ನಾಸ್ತಿಕರಾದ, ಕಾರಂತರು ಕಂಡ ದೇವರು ಎಂಬ ಮಾತು ತಮಗೆ ಪಥ್ಯವಾಗದೇ ಹೋಗಬಹುದು. ಆದರೆ ಶಿವರಾಮ ಕಾರಂತರು ಈ ದೇವರ ಕುರಿತು ಸಾಕಷ್ಟು ಜಿಜ್ಞಾಸೆ ಮಾಡಿದ್ದಾರೆ. ನಾಸ್ತಿಕರಾಗಿಯೂ ದೇವರ ಬಗೆಗೆ ಅವರದೇ ಆದ ವಿಚಾರ ಸರಣಿ ಇದೆ. ಕಾರಂತರ ಕಾದಂಬರಿಗಳಲ್ಲಿ; ಬರುವ ಪಾತ್ರಗಳು ನಂಬುವ ದೇವರ ವಿಚಾರವನ್ನು ನಾವು ಬೇರೆ ದೃಷ್ಟಿಕೋನದಿಂದೇ ನೋಡಬೇಕಾಗುತ್ತದೆ. ದೇವರು ಇರುವನೋ ಇಲ್ಲವೋ ಎಂಬ ಪ್ರಶ್ನೆ ಅವರಿಗೆ ಅಷ್ಟು ಮುಖ್ಯವಲ್ಲ. "ದೇವರು ಇದ್ದರೆ, ಎಂದು ಈ ಸಂಶಯದ ಪ್ರಶ್ನೆ ಹಾಕಿದುದು ಇದ್ದಾನೆ ಎನ್ನುವುದಕ್ಕೂ ಅಲ್ಲ, ಇಲ್ಲ ಎಂದು ತೀರ್ಮಾನಿಸುವುದಕ್ಕೂ ಅಲ್ಲ. ನಮ್ಮ ಪಾಲಿಗೆ ಬಂದಿರುವ ದೇವರು ಎಂಥವನು?'' ಎಂಬುದನ್ನು ಕಂಡು ಕೊಳ್ಳುವುದೇ ಅವರ ಮುಖ್ಯ ಉದ್ದೇಶ. ಕಾರಂತರು ಇಲ್ಲಿ ದೇವರ ಅಸ್ತಿತ್ವದ ಬಗ್ಗೆ ತೀರ್ಮಾನ ಕೊಟ್ಟು ಕೈ ತೊಳೆದುಕೊಂಡಿಲ್ಲ. ಅದಕ್ಕೆ ಕಾರಣವೂ ಇದೆ. "ಈ ಪ್ರಶ್ನೆ ಶತಮಾನಗಳಿಂದ ಮೂಡಿ ಬಂದುದು. ಆಸ್ತಿಕರೂ ನಾಸ್ತಿಕರೂ ಸೇರಿಯೇ ಬೆಳೆಸಿದವರು. ಮುಂದೆಯೂ ನಿವಾರಣೆಯಾಗುವ ಪ್ರಶ್ನೆ ಇದಲ್ಲ. ಅವನನ್ನು ಕಾಣದೆ ತಿಳಿಯದೆ ಉಂಟೆನ್ನುವವರೂ, ಕಾಣಲು ಯತ್ನಿಸದೇ `ಇಲ್ಲ' ಎನ್ನುವವರೂ ಒಂದೇ ಜಾತಿಯ ವ್ಯಕ್ತಿಗಳು. ಅವನು ಇರುವುದಾದರೆ ನಾವು ಇಲ್ಲವೆಂದರೂ ಇಲ್ಲದಾಗನು. ಅವನು ಇಲ್ಲದಿರುವಲ್ಲಿ ಉಂಟೆಂದರೂ ಉಂಟಾಗನು. ನಮಗೆ ಮುಖ್ಯವಾಗಿ ಉಳಿಯುವ ಪ್ರಶ್ನೆ ನಮ್ಮ ಜೀವನದಲ್ಲಿ ಅವನು ಎಷ್ಟು ಕೆಲಸ ಮಾಡುತ್ತಿದ್ದಾನೆ ಎಂದು. ದೇವರು ಇರುವನೆಂದು ಹಗಲೆಲ್ಲ ವಾದಿಸಿ, ನಡತೆಯಲ್ಲಿ ಅವನ ಅಸ್ತಿತ್ವವನ್ನು ಮರೆಯುವ ಮುಕ್ಕಾಲು ಮೂರು ವೀಸ ಜಗತ್ತಿಗೆ ಅವನಿದ್ದರೇನು ಇಲ್ಲದಿದ್ದರೇನು? ಇವರಿಗಿಂತ ಅವನು ಇಲ್ಲ ಎಂದು ಶಂಕಿಸುವ ಜನ ವರ್ಗ ಏನು ಕೀಳು ಎಂದು ಕಾರಂತರು ಪ್ರಶ್ನಿಸುತ್ತಾರೆ. ಆಸ್ತಿಕರು ಸಂಕಟ ಬಂದಾಗ ವೆಂಕಟರಮಣ ಎನ್ನುವ ಪಂಥ ದೇವರು. ಇವರಿಗೆ ಅರ್ಜಂಟಾದಾಗ ಮಾತ್ರ ದೇವರ ನೆನಪಾಗುತ್ತದೆ. ಇವರಿಗಿಂದ ದೇವರೇ ಇಲ್ಲ ಎಂಬುದಾಗಿ ವಾದಿಸುವವರೆ ವಾಸಿ ಎಂಬ ನಿಲುವು ಅವರದು.

ಮನುಷ್ಯ ಜೀವನದಲ್ಲಿ ಈ ದೇವರು ಕಾಲಿಟ್ಟ ಬಗೆಯನ್ನು ಕಾರಂತರು ಬಹಳ ಸೊಗಸಾಗಿ ವಿವರಿಸಿದ್ದಾರೆ. "ತೀರ ಅನಾದಿಯುಗದ ಮನುಷ್ಯನಿಗೆ ದೇವರು ಮೃತ್ಯು ಮತ್ತು ಬೇನೆಗಳ ಒಡೆಯ ಗುಡುಗು ಮಿಂಚುಗಳಿಂದ ದಂಡಿಸುವವ. ಅವನು ಒಲಿತಾದರೆ ಇವರ ಬೇಟೆಯ ಮೊಲ, ಹಾವು, ಕಂದ ಮೂಲ ಕೊಡುವವ, ಸಾಕಷ್ಟು ಹೆಂಡಿರನ್ನೂ ಒದಗಿಸುವವನು. ಮನುಷ್ಯನ ಊಹಾ ಶಕ್ತಿ ಭಾವೋದ್ರೇಕಗಳು ಬೆಳೆದಂತೆ ದೇವರ ಇವೇ ಶಕ್ತಿಗಳು ಮತ್ತಷ್ಟು ಉಜ್ವಲವಾಗಿ ಬೆಳೆದುವು ಕಾಳಿ ಚಂಡಿಯರು ಈ ಬಗೆಯವರು. ಇನ್ನೊತ್ತಟ್ಟು ಶಾಂತ ಆವರಣದಲ್ಲಿ ಯುದ್ಧ, ಬೇನೆಗಳ ಭೀತಿಯಿಲ್ಲದೇ ಬೆಳೆದವರು, ಸಂಭಾವಿತರಾದ, ಯೋಗ್ಯರಾದ ಭಕ್ತರಿಗೆ ಬೇಡಿದಂತೆ ವರನೀಡುವ ದೇವರನ್ನೂ ಹುಟ್ಟಿಸಿದರು. ಈ ಮೇಲಿನ ಮಾತುಗಳಿಂದ ಒಂದಂಶ ಸತ್ಯವಾಗುತ್ತದೆ. ದೇವರನ್ನು ಸೃಷ್ಟಿ ಮಾಡಿದವರಾರು? ಎಂಬ ಪ್ರಶ್ನೆಗೆ ಉತ್ತರವೂ ಅಲ್ಲೇ ದೊರೆಯುತ್ತದೆ. ಮನುಷ್ಯನೇ ಈ ದೇವರನ್ನು ನಾನಾ ಕಾರಣಗಳಿಂದ ಹುಟ್ಟಿಸಿ ಬಿಟ್ಟ. ಅದ್ದರಿಂದ ನಾವು ಸೃಷ್ಟಿಸಿದ ದೇವರ ಸ್ವಭಾವವೂ ನಮ್ಮಿಂದ ಏನೇನೂ ಭಿನ್ನವಾಗಿಲ್ಲ ಎನ್ನುತ್ತಾರೆ ಕಾರಂತರು. "ನಮ್ಮ ಶಿವ ವಿಷ್ಣುಗಳೋ ನಮ್ಮಂತೆ ಪರರನ್ನು ದೂಷಿಸುವವರು. ಅವರ ಬಯಕೆಗಳೋ ನಮ್ಮಂತೆ ಯಜ್ಞ ಹವಿಸ್ಸುಗಳ ಬಾಯಾರಿಕೆ ಉಳ್ಳವರು ಅವರಿಗೆ ನಮ್ಮಂತೆ ಶೃಂಗಾರ, ಒಲುಮೆ, ಕಾವುಗಳು ಕಾಡುವವು. ನಮ್ಮಂತೆ ಅವರೂ ರೇಗುವರು ನಮ್ಮಂತೆ ಅವರೂ ತೃಪ್ತರಾಗುವರು. ಅವರ ರೂಪ ಉಡುಗೆಗಳೋ ನಮ್ಮ ಮಿತಿಯನ್ನೇ ತಾಳುವುವು. ಹೆಚ್ಚೆಂದರೆ, ನಮ್ಮ ಊಹೆಯ ಮಿತಿಯನ್ನು ಯಾವ ದೇವರೂ ದಾಟಿಲ್ಲ. ಅವರಿಗೂ ಪೀತಾಂಬರ

ಚಿನ್ನ ರತ್ನಗಳ ಮಡುಲು, ನಮ್ಮಂತೆ ಕಾಲು ಕೈ ಹೆಚ್ಚೆಂದರೆ ನಮ್ಮ ಇಮ್ಮಡಿ ಕೈಗಳು ವಿಷ್ಣುವಿಗೆ. ನಾಲ್ಕಡಿ ಮುಖ ಬ್ರಹ್ಮನಿಗೆ" ಎನ್ನುತ್ತಾರವರು. ದೇವರು 'ನಮ್ಮ ಅಳತೆಯನ್ನು ಮೀರಲಾರನು ಎಂಬ ನಿಲುವು ಕಾರಂತರದು. ನಾವು ಜಗತ್ತನ್ನು ನೋಡುವ ರೀತಿಯಂತೇ ನಮ್ಮ ದೇವರೂ ರೂಪುಗೊಳ್ಳುತ್ತಾನೆ. ಇಲ್ಲಿ ಮನುಷ್ಯನೇ ಮುಖ್ಯನಾಗುತ್ತಾನೆ. ವಿಜ್ಞಾನ ತಂತ್ರಜ್ಞಾನದ ಜೊತೆ ಜೊತೆಗೆ ಈ ದೇವರನ್ನೂ ಮನುಷ್ಯ ಹುಟ್ಟು ಹಾಕಿದ "ಮನುಷ್ಯ ದೊಡ್ಡವನಾಗದೇ ಅವರ ದೇವರೂ ದೊಡ್ಡವನಾದಾನೆಯೆ? ಇವನು ಗುಣೆಯಾದರೆ ಇವನ ಊಹೆ ವಿಶಾಲವಾದರೆ, ಇವನ ಭಾವನೆ ವಿಶಾಲವಾದರೆ, ಅವನ ದೇವರೂ ಹಾಗಾಗುವನು ಮನುಷ್ಯನ ಶಕ್ತಿಗಳು ಎಷ್ಟೆಷ್ಟು ಬೆಳೆಯುವವೋ ಅವನ ದೇವರು ಅಷ್ಟಷ್ಟು ದೊಡ್ಡವನಾಗುವನು. ಇದರಿಂದಲೇ ದೇವರನ್ನು ಮನುಷ್ಯನು ನಿರ್ಮಿಸಿದನು ಎನ್ನುವ ವಿಚಾರವು ಮೂಡಿ ಬಂತು" ಎನ್ನುತ್ತಾರೆ.

'ದೇವರ ಕಲ್ಪನೆಯಲ್ಲಿ 'ಊಹೆ ಬಹುದೊಡ್ಡ ಕೆಲಸ ಮಾಡಿದೆ. ಸ್ವರ್ಗ ನರಕಗಳನ್ನು ಮನುಷ್ಯ ಕಲ್ಪಿಸಿದ್ದೂ ಈ ಊಹೆಯ ಮುಖಾಂತರವೇ. ಹಾಗಿರಬಹುದೆ? ಹೀಗಿರಬಹುದೇ? ಇದೇಕೆ ಹೀಗೆ, ಮರದ ಮೇಲಿಂದ ಹಣ್ಣು ಕೆಳಗೆ ಏಕೆ ಬೀಳಬೇಕು ಈ ತರದ ಚಿಂತನೆಯಿಂದಲೇ ವಿಜ್ಞಾನ ಬೆಳೆದದ್ದುದು. ಅದ್ದರಿಂದ ಕಾರಂತರ ಪ್ರಕಾರ 'ಯಾವನೇ ವ್ಯಕ್ತಿಯ ಊಹೆ ಧ್ಯಾನಗಳೂ ಅವನ ಮಿತಿಯನ್ನೇ ಹೊಂದಿವೆ. ದೇವರ ಚೆಂದ, ಚೆಲುವುಗಳು ಅವನು ಪರಿಚಯಗೊಂಡ ಚೆಂದ ಚೆಲುವುಗಳು. ದೇವರ ಗುಣ ಔದಾರ್ಯಗಳು ಇವನ್ನು ಹೊಂದಿವೆ".

ದೇವರು ನಮ್ಮ ಅಳತೆಯನ್ನು ಮೀರಲಾರನಾದರೆ ನಾವು ಮತ್ತೇಕೆ ಅವನನ್ನು ಆರಾಧಿಸುವುದು. ಅದಕ್ಕೆ ಕಾರಂತರ ಎತ್ತರವಿದು "ನಮ್ಮ ಭಾವನೆಗಳಿಂದಲೇ ಉಗಮವಾಗುವ ದೇವರದೇ ಚಿಂತನೆ ನಮ್ಮನ್ನು ಉದ್ಧರಿಸೀತೇ ಎಂಬ ಪ್ರಶ್ನೆ ಇದರಿಂದ ಹೊರಡುವುದು ಸಹಜ. ನಮ್ಮ ಮಿತಿಯಿಂದ ನಮ್ಮ ದೇವರಿಗೂ ಮಿತಿ, ನಮ್ಮ ದೇವರಿಂದ ನಮಗೂ ಮಿತಿ" ಎನ್ನುತ್ತಾರವರು. ಒಟ್ಟಿನಲ್ಲಿ ಒಂದನ್ನೊಂದು ನಿಯಂತ್ರಣ ಮಾಡುತ್ತವೆ. ಈ ನಿಯಂತ್ರಣ ತಪ್ಪಿದಾಗ ಕೆಲವೊಮ್ಮೆ ಮನುಷ್ಯ ದೇವರನ್ನೂ ಕಡೆಗಾಣಿಸುವುದುಂಟು -ಒಬ್ಬ ದೇವರು ದುರ್ಬಲ ಎನಿಸಿದರೆ ಮತ್ತೊಬ್ಬ ದೇವರನ್ನು ಅರಸಲು ಮುಂದಾಗುತ್ತಾನೆ. ಉದಾ:ಚೋಮನ ದುಡಿ ಕಾದಂಬರಿಯಲ್ಲಿ ಚೋಮ ಪಂಜುರ್ಲಿಯನ್ನು ಬಿಟ್ಟು ಕ್ರಿಶ್ಚಿಯನ್ ದೇವರ ಕಡೆಗೆ ಮನಸ್ಸು ಮಾಡುವುದು ಹೀಗೆ ಅದೆಷ್ಟೋ ಉದಾ ನೋಡಬಹುದು. ಯಾವ ಮದ್ದಿಗೂ (ಔಷಧಕ್ಕೂ) ಗುಣವಾಗದೇ ವೈದ್ಯರಲ್ಲಿ

(ಪುಟ 16ಕ್ಕೆ)

# ಸಂಮೋಹಿನಿ ಚಿಕಿತ್ಸೆ - 11

● ಡಾ| ಉಷಾರಾವ್

ಸಂಮೋಹಿನಿ ತಂತ್ರದ ನಿಜ ಸ್ವರೂಪದ ಬಗೆಗೆ ಶೇಕಡಾ 90ರಷ್ಟು ಜನರಿಗೆ ಇನ್ನೂ ತಿಳಿದಿಲ್ಲ. ಹಾಗೆಂದ ಮಾತ್ರಕ್ಕೆ ಯಾರೂ ಅದರ ಉಪಯುಕ್ತತೆಯನ್ನು ನಿರಾಕರಿಸುವಂತಿಲ್ಲ. ಅದೇ ರೀತಿ ನಿದ್ರೆಯ ನಿಜ ಸ್ವರೂಪದ ಬಗೆಗೆ ಪ್ರಾಯಶಃ ಯಾರಿಗೂ ಗೊತ್ತಿಲ್ಲವಿರಬಹುದು. ಆದರೆ ಯಾರೂ ಅದರ ಮಹತ್ವವನ್ನು ಅಲ್ಲಗಳೆಯುವಂತಿಲ್ಲ. ಸಂಮೋಹಿನಿ ಬಗೆಗೂ ಇದೇ ಮಾತು ಅನ್ವಯಿಸುತ್ತದೆ. ವಾಸ್ತವವಾಗಿ ಈ ವಿಷಯದ ಬಗೆಗೆ ಬೇಕಾದಷ್ಟು ಪುಸ್ತಕಗಳಿವೆ. ಯಾರು ಬೇಕಾದರೂ ಈ ಪುಸ್ತಕಗಳನ್ನು ಓದಿ ಸಂಮೋಹಿನಿ ತಂತ್ರದ ಬಗೆಗೆ ತಮ್ಮ ತಿಳುವಳಿಕೆಯನ್ನು ವಿಸ್ತರಿಸಿಕೊಳ್ಳಬಹುದು. ಒಬ್ಬ ವ್ಯಕ್ತಿಯನ್ನು ಸುಷುಪ್ತಾವಸ್ಥೆಗೆ ಒಳಪಡಿಸಿ ಆ ಸಮಯದಲ್ಲಿ ನೀಡಲಾಗುವ ಸೂಚನೆಗಳನ್ನು ಆತ ಪಾಲಿಸುವಂತೆ ಮಾಡುವುದೇ ಸಂಮೋಹಿನಿ ತಂತ್ರ.

ಉದಾಹರಣೆಗೆ ಕೇವಲ ಒಂದೇ ಒಂದು ಪದ ಅಥವಾ ವಾಕ್ಯ ಮುಖಕ್ಕೆ ರಕ್ತ ನುಗ್ಗುವಂತೆ ಮಾಡಿ ಕೆನ್ನೆಗಳನ್ನು ಕೆಂಪೇರಿಸುತ್ತದೆ. ನಮ್ಮ ಇಡೀ ಜೀವನ 'ಇಂಥ' ಸೂಚನೆಗಳಿಂದ ಸತತವಾಗಿ ಪ್ರಭಾವಿತವಾಗುತ್ತಿರುತ್ತದೆ. ಜಾಹಿರಾತಿನ ಯಶಸ್ಸು ಸೂಚನೆಯ ಶಕ್ತಿಯನ್ನು ಅವಲಂಬಿಸಿರುತ್ತದೆ. ಜಾಹಿರಾತುದಾರನ ಕೌಶಲ್ಯವು ಮಾರಾಟಕ್ಕಿರುವ ವಸ್ತು ತಮಗೆ ಅನಗತ್ಯ ಎಂದು ಜನರು ಭಾವಿಸುವಂತೆ ಮಾಡುವುದರಲ್ಲಿದೆ. ಇಂಥ ಸೂಚನೆಯ ಶಕ್ತಿಯನ್ನು ಹೆಚ್ಚಿಸುವಲ್ಲಿ ಕಲ್ಪನೆಯೂ ಮುಖ್ಯ ಪಾತ್ರ ನಿರ್ವಹಿಸುತ್ತದೆ. ಪ್ರಜ್ಞೆಯ ನಿಯಂತ್ರಣ ಮತ್ತು ಗಮನ ಕೇಂದ್ರೀಕರಿಸುವ ಮೂಲಕ ಇಂಥ ಸೂಚನೆಯ ಶಕ್ತಿಯನ್ನು ಹೆಚ್ಚಿಸಲು ಸಹಾಯವಾಗುತ್ತದೆ. ಆದುದರಿಂದ ವೈಜ್ಞಾನಿಕವಾಗಿ ನೀಡಲಾದ ಸೂಚನೆಯು 'ಹೈಪರ್ ಸಜೆಸ್ಟಿಬಿಲಿಟಿ' ಸ್ಥಿತಿಯನ್ನು ಸಾಧ್ಯಗೊಳಿಸುತ್ತದೆ. ಈ ಪ್ರಕ್ರಿಯೆಯನ್ನು ಹಿಪ್ನಾಸಿಸ್ (ಸಂಮೋಹಿನಿ) ಎಂದು ಕರೆಯಲಾಗುತ್ತಿದೆ. ಆದರೆ ಸಂಮೋಹಿನಿ ಎಂದರೆ ಕೇವಲ 'ಸರಳ ಸೂಚನೆ'ಯಷ್ಟೇ ಅಲ್ಲ ಎಂಬುದನ್ನು ತಿಳಿದುಕೊಳ್ಳಬೇಕು.

ಸಂಮೋಹಿನಿ (ಹಿಪ್ನಾಸಿಸ್) ಎಂದರೆ ಸೂಚನೆ ಮೂಲಕ ಉಂಟು ಮಾಡಲಾದ ಒಂದು ಬಗೆಯ ಉತ್ಪ್ರೇಕ್ಷಿತ ಭಾವಗ್ರಾಹಕ್ಕೆ (ಸಜೆಸ್ಟಿಬಿಲಿಟಿ) ಸ್ಥಿತಿ. ಗುಣಕಾರಿ ಪರಿಣಾಮ ಉಂಟು ಮಾಡುವಲ್ಲಿ, ಅದರ ವಿವಿಧ ಶಕ್ತಿಗಳ ಬಗೆಗೆ ಚೆನ್ನಾಗಿ ತಿಳಿದುಕೊಳ್ಳುವುದು ಅಗತ್ಯವಾಗಿದೆ. ಪ್ರಸ್ತುತ ಈ ಲೇಖನದಲ್ಲಿ ದುಶ್ಚಟಗಳ ನಿವಾರಣೆಯಲ್ಲಿ ಸಂಮೋಹಿನಿ ತಂತ್ರ ಯಾವ ರೀತಿ ಸಹಾಯಕವಾಗಬಲ್ಲುದು ಎಂಬ ಬಗ್ಗೆ ತಿಳಿದು ಕೊಳ್ಳಲು ಪ್ರಯತ್ನಿಸೋಣ.

ಪೆನ್ಸಿಲಿನ್ ಅಥವಾ ಇನ್ನಾವುದೇ ಒಂದು ಔಷಧಿ ಸರ್ವರೋಗ ಪರಿಹಾರಿಣಿ ಎಂದು ಭಾವಿಸುವುದು ಎಷ್ಟು ಮೂರ್ಖತನವೋ ಹಾಗೇ ಆ ಸಂಮೋಹಿನಿ ತಂತ್ರದಿಂದ ಎಲ್ಲವನ್ನೂ ಗುಣ ಪಡಿಸುವುದು ಎಂದು ಭಾವಿಸುವುದೂ ಹಾಗೆಯೇ. ಆಗ ಸಂಮೋಹಿನಿ ತಂತ್ರದ ಬಗೆಗೆ ಸಂಶಯದಿಂದ ನೋಡಲಾಗುವುದು. ಹೇಗೆ ಇರಲಿ ರೋಗೀ ಪ್ರಾಮಾಣಿಕನಾಗಿದ್ದರೆ ಮತ್ತು ಹಿಪ್ನೋಥೆರಪಿಸ್ಟ್ ವಿಭಿನ್ನ ಬಗೆಯ ವ್ಯಾಧಿಗಳಿಗೆ ಚಿಕಿತ್ಸೆ ನೀಡುವಲ್ಲಿ ವಿವಿಧ ತಂತ್ರಗಳನ್ನು ಬಳಸುವಲ್ಲಿ ಚತುರನಾಗಿದ್ದರೆ ಸಂಮೋಹಿನಿ ತಂತ್ರ ಬಹಳ ಯಶಸ್ವಿಯಾಗಿರುವುದು. ಆದರೆ ಸೂಚನೆಯ ಪದಪ್ರಯೋಗ ಹಾಗೂ ವಾಕ್ಯರಚನೆ ಬಹಳ ಮುಖ್ಯವಾದುದು. ಒಂದು ವಿಷಯ ಖಂಡಿತ. ಅದು ಒಬ್ಬ ರೋಗಿ ಸಂಮೋಹಿನಿಗೆ ಗುರಿಪಡಿಸಲ್ಪಟ್ಟಾಗ ಆತನ/ಆಕೆಯ ಭಾವಪ್ರೇರಣಾ ಶಕ್ತಿ ಯಾವಾಗಲೂ ಜಾಸ್ತಿಯಾಗುತ್ತದೆ. ಆದರೆ ಇದು ಎಷ್ಟರಮಟ್ಟಿಗೆ ಸಂಭವಿಸುತ್ತದೆ ಎಂಬುದು ಸಹಜವಾಗಿಯೇ ಟ್ರಾನ್ಸ್‌ನ ಗಾಢತೆಯನ್ನು ಅವಲಂಬಿಸಿರುವುದು. ಸೂಚನೆಗಳನ್ನು ನೀಡುವಾಗ, ಈ ಅಂಶವನ್ನು ಮುಖ್ಯವಾಗಿ ಗಮನೆಗೆ ತೆಗೆದುಕೊಳ್ಳುವುದು ಅಗತ್ಯ. ಪ್ರಸ್ತುತ ನಮ್ಮ ಸಮಸ್ಯೆ ದುಶ್ಚಟಗಳಿಗೆ ಚಿಕಿತ್ಸೆ ನೀಡುವುದು. ಅದ್ದರಿಂದ ವಿವಿಧ ಬಗೆಯ ದುಶ್ಚಟಗಳನ್ನು ಸಂಮೋಹಿನಿ ಮೂಲಕ ಹೇಗೆ ಗುಣಪಡಿಸಬಹುದು ನೋಡೋಣ.

ದುಶ್ಚಟಗಳು ಅನೇಕ ಬಗೆಯವು. ಆದರೆ ಇವುಗಳ ಪೈಕಿ ಸಾಮಾನ್ಯವಾದ ಕೆಲವು ಚಟಗಳೆಂದರೆ ವಿಪರೀತ ಧೂಮಪಾನ. ವಿಪರೀತ ಮದ್ಯಪಾನ ಮತ್ತು ವಿಪರೀತವಾಗಿ ಹಸ್ತಮೈಥುನದಲ್ಲಿ ತೊಡಗಿರುವುದು ಇತ್ಯಾದಿ.

"ಸಂಮೋಹಿನಿ ತಂತ್ರ ದುಶ್ಚಟವನ್ನು ಹೇಗೆ ನಿವಾರಿಸಬಲ್ಲುದು?" ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಧೂಮಪಾನ ಮಾನಸಿಕ ಒತ್ತಡ ಹಾಗೂ ಆತಂಕವನ್ನು ಪರಿಹರಿಸಲು ಒಂದು ದಾರಿ ಎಂಬ ಸಾಮಾನ್ಯ ಅಭಿಪ್ರಾಯವಿದೆ. ಧೂಮಪಾನದಿಂದ ತಮಗೆ ರಿಲ್ಯಾಕ್ಸ್ ಆಗುತ್ತದೆ ಎಂದು ಧೂಮಪಾನಿಗಳು ಹೇಳುತ್ತಾರೆ. ಧೂಮಪಾನಿಗಳಲ್ಲಿ ಕೆಲವರು ತಮ್ಮ ನಡವಳಿಕೆಯಲ್ಲಿ ಕೆಣಕುವವರಾಗಿರಬಹುದು. ಮತ್ತೆ ಕೆಲವರು ನಾಚಿಕೆಯ ಹಾಗೂ ಸಂಕೋಚದ ಸ್ವಭಾವದವರಾಗಿರುತ್ತಾರೆ. ವಿಪರೀತವಾಗಿ ಧೂಮಪಾನ ಮಾಡುವವರು ಅದು "ನಮ್ಮ ನರಗಳನ್ನು ಸಡಿಲಗೊಳಿಸುತ್ತದೆ, ಅದಕ್ಕೇ ಸೇದುತ್ತೇವೆ" ಎಂದು

ಹೇಳುತ್ತಾರೆ. ವಾಸ್ತವವಾಗಿ ಅದು ನರಗಳ ಮೇಲೆ ತಾತ್ಕಾಲಿಕ ವಾದ, ಅಂದರೆ ದಂತವೈದ್ಯರು ಹಲ್ಲುಗಳ ನರಗಳ ಮೇಲೆ ಇಂಜೆಕ್ಷನ್ ನೀಡಿದಾಗ ನೋವು ತಿಳಿಯದಂತೆ ಮಾಡುವಂಥವೇ ಪರಿಣಾಮ ಉಂಟು ಮಾಡುತ್ತದೆ. ಇಂಜೆಕ್ಷನ್‌ನ ಪ್ರಭಾವ ಕಡಿಮೆಯಾಗ ತೊಡಗಿದಂತೆ ಮತ್ತೆ ನೋವು, ಉರಿ ಪ್ರಾರಂಭವಾಗುತ್ತದೆ. ಪ್ರತಿ ಸಲ ಧೂಮಪಾನ ಮಾಡಿದಾಗಲೂ ಇಂಥದೇ ಪರಿಣಾಮವಾಗುತ್ತದೆ. ಆಗ ಮೇಲಿಂದ ಮೇಲೆ ಧೂಮಪಾನ ಮಾಡಬೇಕಾಗಿ ಬಂದು ಅಂಥ ವ್ಯಕ್ತಿ `ಚೈನ್ ಸ್ಮೋಕರ್' ಆಗುತ್ತಾನೆ. ಅಂಥ ರೋಗಿಗಳಿಗೆ ಒಂದು ವ್ಯವಸ್ಥಿತವಾದ ಕ್ಲಿನಿಕಲ್ ಹಿಪ್ನಾಟಿಕ್ (ಸಂಮೋಹಿನಿ) ತಂತ್ರ ಬಹಳ ಪ್ರಯೋಜನಕರವಾಗುತ್ತದೆ. ನಮ್ಮ ಕ್ಲಿನಿಕ್‌ನಲ್ಲಿ ನಾವು ಸಾಮಾನ್ಯವಾಗಿ ಬಳಸುವ ತಂತ್ರಗಳೆಂದರೆ ಸೈಕೋಫೀಡ್ ಬ್ಯಾಕ್ ತಂತ್ರ ಅಥವಾ ಡಿಸೆನ್ಸಿಟೈಸೇಷನ್ ತಂತ್ರ.

ಸಾಮಾನ್ಯವಾಗಿ ನಮ್ಮ ಕ್ಲಿನಿಕ್‌ಗೆ ಬರುವ ರೋಗಿಗಳು ಈ ಮುಂಚೆಯೇ ಧೂಮಪಾನ ನಿಲ್ಲಿಸಲು ಪ್ರಯತ್ನಿಸಿ ವಿಫಲರಾದವರು. ಅಂಥ ರೋಗಿಗಳು ತಮ್ಮ ಈ ದುಶ್ಚಟದಿಂದ ದೂರವಾಗಲು ಚಿಕಿತ್ಸೆ ಪಡೆಯುವ ಸಲುವಾಗಿ ಸ್ವಯಂ ಪ್ರೇರಣೆಯಿಂದ ಕ್ಲಿನಿಕ್‌ಗೆ ಬರುತ್ತಾರೆ. ಅವರಿಗೆ ಯೋಜಿಸಲಾಗುವ ಅಭ್ಯಾಸದ ಅವಧಿಗಳು ನಾಲ್ಕೂವರೆಯಿಂದ ಐದು ವಾರಗಳ ವರೆಗೆ. ಪ್ರಾಥಮಿಕ ಹಂತದಲ್ಲಿ ರೋಗಿ ಧೂಮಪಾನ ಮಾಡಲು ಆತ ಕೊಡುವ ಕಾರಣಗಳೇನು, ಎಂಥ ಪರಿಸ್ಥಿತಿಗಳಲ್ಲಿ, ಯಾತಕ್ಕಾಗಿ ಹಾಗೂ ಎಷ್ಟು ಬಾರಿ ಸೇದುತ್ತಾನೆ. ಆದರಿಂದ ಆತನಿಗುಂಟಾಗುವ ಅನುಭವ, ಎಷ್ಟು ಕಾಲದಿಂದ ಧೂಮಪಾನ ಮಾಡುತ್ತಿದ್ದಾನೆ ಮತ್ತು ಆತ ಧೂಮಪಾನ ನಿಲ್ಲಿಸಲು ಪ್ರಯತ್ನಿಸಿದಾಗ ಏನಾಯಿತು ಇತ್ಯಾದಿ ವಿವರಗಳನ್ನು ಆತನಿಂದ ಪಡೆಯಲಾಗುವುದು. ಜತೆಗೆ ಆತನ ಆರೋಗ್ಯದ ಇತಿಹಾಸ, ಮಹತ್ವದ ಭಾವೋದ್ರೇಕದ ತೊಂದರೆಗಳು ಮತ್ತು ತೆಗೆದು ಕೊಂಡ ಔಷಧಿ ಇತ್ಯಾದಿಗಳ ಬಗೆಗೆ ಮಾಹಿತಿಗಳನ್ನು ಪಡೆಯಲಾಗುವುದು. ಮೊದಲನೆಯ ಮತ್ತು ಎರಡನೆಯ ಭೇಟಿಯಲ್ಲಿ ರೋಗಿಯ ಇತಿಹಾಸವನ್ನು ಅಧ್ಯಯನ ಮಾಡಲಾಗುವುದು. ರೋಗಿ ಸಂಮೋಹಿನಿ ಟ್ರಾನ್ಸ್‌ನಲ್ಲಿರುವಾಗ ಆತನಿಗೆ ನೀಡಲಾಗುವ ಸಾಮಾನ್ಯ ಸೂಚನೆಗಳು ಕೆಳ ಕಂಡಂತಿರುವುವು:

"ನಾನು ಸಿಗರೇಟು ಹಚ್ಚಿ ಸೇದಲಾರಂಭಿಸಿ ದಾಗಲೆಲ್ಲ, ಸಿಗರೇಟ್‌ನಿಂದ ರಬ್ಬರ್ ಸುಟ್ಟ ವಾಸನೆ ಬರುತ್ತದೆ. ಆಗ ತಕ್ಷಣ ಅದನ್ನು ಬಿಸಾಡುತ್ತೇನೆ." ಸತತ ಪ್ರಯತ್ನದಿಂದ ರೋಗಿ ಈ ದುಶ್ಚಟದಿಂದ ದೂರವಾಗಲು ಸಾಧ್ಯವಾಗುತ್ತದೆ. ಇಂಥ ವಿಧಾನವು ರೋಗಿಯ ಸಿಗರೇಟ್ ದಾಹವನ್ನು ಕೊನೆಗೊಳಿಸುವುದಿಲ್ಲ. ಆದರೆ ತಾತ್ಕಾಲಿಕವಾಗಿ ಆತ ಆದರ ಆನಂದವನ್ನು ಸವಿಯಲಾಗದಂತೆ ತಡೆಗಟ್ಟಬಲ್ಲುದು, ಮತ್ತು ಈ ಅಸಹ್ಯ ರುಚಿ ಸತತವಾದ ಪ್ರತಿಕ್ರಿಯೆ ಉಂಟುಮಾಡಿ ಧೂಮಪಾನ ನಿಲ್ಲಿಸುವಂತೆ ಮಾಡಬಹುದು ಎಂದು ನಿರೀಕ್ಷಿಸಬಹುದು.

ಸಂಮೋಹಿನಿ ಬಳಕೆಯ ನಂತರದ ಪ್ರಭಾವ ಬಹಳ ಬಲಿಷ್ಠವಾಗಿದ್ದಾಗ ಮಾತ್ರ ಈ ಬಗೆಯ ಗುಣಕಾರಿ ಪರಿಣಾಮ ಸಾಧ್ಯವಾಗುವುದು. ಅಂಥ ರೋಗಿಗಳು ಆಗಾಗ್ಗೆ ಸಿಗರೇಟ್ ಅಂಟಿಸುತ್ತಿರುವುದನ್ನು ಮತ್ತು ಮೂರು ನಾಲ್ಕು ಸಾರಿ ಹೊಗೆ ಬಿಟ್ಟ ನಂತರ ಅದನ್ನು ಅಸಹ್ಯ ಭಾವದಿಂದ ದೂರ ಎಸೆದು ಬಿಡುವುದನ್ನು ಕಾಣಬಹುದು. ಅನಂತರ ಅವರು ಸಂಪೂರ್ಣ ತೃಪ್ತಿಯಾಗಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸುವರು ಮತ್ತು ಇನ್ನಷ್ಟು ಪ್ರಯೋಗ ನಡೆಸುವುದಿಲ್ಲವೆಂದು ಆಶ್ವಾಸನೆ ನೀಡುವರು!

ಆದರೆ, ಮೇಲೆ ಹೇಳಿದ ತಂತ್ರದಿಂದ ಎಲ್ಲ ರೋಗಿಗಳನ್ನೂ ಗುಣಪಡಿಸಲು ಸಾಧ್ಯವಿಲ್ಲ. ಆದುದರಿಂದ ನಾವು ಸೈಕೋಫೀಡ್ ಬ್ಯಾಕ್ ತಂತ್ರ ಅಥವಾ ಡಿಸೆನ್ಸಿಟೈಸೇಷನ್ ತಂತ್ರವನ್ನು ಬಳಸುತ್ತೇವೆ. ಧೂಮಪಾನ ಚಟವನ್ನು ನಿಲ್ಲಿಸುವುದರಲ್ಲಿ ಸಂಮೋಹಿನಿ ಉಪಯುಕ್ತವಾದುದೇ ಎಂಬುದು ಇಲ್ಲಿ ಬಹಳ ಮುಖ್ಯವಾದ ಪ್ರಶ್ನೆಯಲ್ಲ. ಅದನ್ನು ಅತ್ಯಂತ ಪರಿಣಾಮಕಾರಿಯಾಗಿ ಹೇಗೆ ಬಳಸಬಹುದು ಎಂಬುದೇ ಮುಖ್ಯ. ಆದುದರಿಂದ ಇತರ ವಿವಿಧ ವಿಧಾನಗಳ ಪೈಕಿ `ಡಿಸೆನ್ಸಿಟೈಸೇಶನ್ ತಂತ್ರ' ಅಥವಾ ``ಸೈಕೋಫೀಡ್ ಬ್ಯಾಕ್ ತಂತ್ರ''ವನ್ನೂ ಆಯ್ಕೆ ಮಾಡಲಾಗುವುದು.

ಪ್ರತಿಯೊಬ್ಬರಿಗೂ ಗೊತ್ತಿರುವಂತೆ ಕಲ್ಪನಾ ಶಕ್ತಿಯು ಇಚ್ಛಾ ಶಕ್ತಿಗಿಂತ ಹೆಚ್ಚು ಬಲಿಷ್ಠವಾದುದು. ಮಾನವನ ಕಲ್ಪನಾ ಶಕ್ತಿಯ ಸಹಾಯವನ್ನು ಪಡೆದುಕೊಂಡು ಸಂಮೋಹಿನಿ ತಂತ್ರವು ರೋಗಿಯ ನರಗಳನ್ನು ಶಾಂತಗೊಳಿಸಬಲ್ಲುದು ಮತ್ತು ಅವುಗಳನ್ನು ನಿಯಂತ್ರಿಸುವ ಬಗೆಯನ್ನು ಬೋಧಿಸಬಲ್ಲುದು. ಡಿಸೆನ್ಸಿಟೈಸೇಷನ್ ತಂತ್ರದಲ್ಲಿ ಮಾಡುವುದು ಇದನ್ನೇ. ದೈಹಿಕ ವಿಶ್ರಾಂತಿಯ (ರಿಲ್ಯಾಕ್ಸೇಷನ್) ತಂತ್ರದ ಮೂಲಕ ರೋಗಿಯನ್ನು ಸಂಮೋಹಿನಿ ಟ್ರಾನ್ಸ್‌ಗೆ ಒಳಪಡಿಸಿದ ನಂತರ ಹಿಪ್ನೋಥೆರಪಿಸ್ಟ್ ಹೇಳುವುದನ್ನು ರೋಗಿ ಆಲಿಸುತ್ತಾನೆ -

``ದೊಡ್ಡ ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿ ನೀನು ನಡೆದಾಡುತ್ತಿರುವುದಾಗಿ ಊಹಿಸಿಕೋ. ಅದು ಸಾಯಂಕಾಲದ ಸಮಯ. ಗಾಳಿ ಶುಭ್ರವಾಗಿದೆ. ಸೂರ್ಯ ಮುಳುಗುವುದರಲ್ಲಿದ್ದಾನೆ. ಆದರೂ ಪ್ರಕಾಶಿಸುತ್ತಿದ್ದಾನೆ - ಈಗ ಧೂಮಪಾನ ಮಾಡಬೇಕೆಂಬ ಅಪೇಕ್ಷೆ ನಿನ್ನನ್ನು ಕಾಡುತ್ತಿಲ್ಲ ಎಂಬ ಸುಂದರ ಭಾವನೆ ನಿನ್ನಲ್ಲಿ ಆಗುತ್ತಿದೆ. ನೀನು ನಿನ್ನ ಹತೋಟಿಯಲ್ಲಿರುವಿ. ಸಿಗರೇಟ್‌ನ ಹತೋಟಿಯಲ್ಲಿಲ್ಲ. ಈಗ ಹೆಚ್ಚು ಶಕ್ತಿಯುಂದಿರುವಂತೆ ನಿನಗೆ ಅನ್ನಿಸುತ್ತಿದೆ. ನಿನ್ನ ಗಂಟಲು ಬಹಳ ಸ್ವಚ್ಛ ಆಗಿದೆ. ನಿನ್ನ ಶ್ವಾಸಕೋಶಗಳೂ ಶುದ್ಧವಾಗುತ್ತಿವೆ. ನಿನಗೆ ನಿನ್ನ ಬಗೆಗೆ ಹೆಮ್ಮೆಯಾಗುತ್ತಿದೆ. ನಿನಗೆ ಎಷ್ಟು ಒಳ್ಳೆಯ ಭಾವನೆಯಾಗುತಿತಿದೆ ಎಂದು ಯೋಚಿಸಿದಷ್ಟೂ ನಿನ್ನ ಹೆಜ್ಜೆಗಳು ದೃಢವಾಗುತ್ತವೆ. ಕ್ಯಾಂಪಸ್‌ನಲ್ಲಿ ನಿನ್ನ ಓಡಾಟವನ್ನು ಮುಂದುವರಿಸು. ಹೌದು ಈಗ ಕತ್ತಲೆಯಾಗುತ್ತಿದೆ. ನೀನು ಮನೆ ಕಡೆ ಹೆಜ್ಜೆ ಹಾಕಲಾರಂಭಿಸುವಿ. ನೀನು ಇಂದು ಧೂಮಪಾನ ಮಾಡೇ ಇಲ್ಲ ಎಂದು ನಿನಗೆ ನಿಜಕ್ಕೂ ಆಶ್ಚರ್ಯವಾಗಿದೆ! ನೀನು ಈ ಸಂಗತಿಯನ್ನು ಮನೆಯಲ್ಲಿ ಎಲ್ಲರಿಗೂ ವಿವರಿಸುವಿ. ಆದರೆ ಅವರಿಗೆ ಸಂತೋಷಭರಿತ ಆಶ್ಚರ್ಯ. ಈಗ ನಾನು ಸಂಖ್ಯೆಗಳನ್ನು ಎಣಿಸಲಾರಂಭಿಸುತ್ತೇನೆ. ನಾನು ಮೂರು ಎಣಿಸಿದ ನಂತರ ನೀನು ನಿಧಾನವಾಗಿ ಕಣ್ಣುಗಳನ್ನು ತೆರೆಯುವಿ. ಕಣ್ಣು ತೆರೆದಾಗ ನೀನು ಉಲ್ಲಾಸಭರಿತ ಹಾಗೂ ರಿಲ್ಯಾಕ್ಸ್ ಮೂಡ್‌ನಲ್ಲಿರುವಿ. ನಿನಗೆ ಎಲ್ಲವೂ ಜ್ಞಾಪಕದಲ್ಲಿರುವುದು. ಈ ಸೂಚನೆಯನ್ನು ಅಭ್ಯಾಸಕ್ಕೆ ತರುವಿ. ಮುಂದಿನ ಸಾರಿ ಇನ್ನೂ ಹೆಚ್ಚಿನ ಉಲ್ಲಾಸ ಪಡೆಯುವಿ.''

* * * * *

ಹಲವು ಸಾರಿ ಅಭ್ಯಾಸವನ್ನು ಮುಂದುವರಿಸಿದ ನಂತರ ರೋಗಿ ಸಂಪೂರ್ಣ ತೃಪ್ತಿ ವ್ಯಕ್ತಪಡಿಸಿದ.

ಮದ್ಯ ವ್ಯಸನಕ್ಕೂ (ಆಲ್ಕೊಹಾಲಿಸಂ) ಬಗೆಯ ಸೂಚನೆ ನೀಡಲಾಯಿತು. ಹಲವು ಸಾರಿ ಅಭ್ಯಾಸ ಮಾಡಿದ ನಂತರ ರೋಗಿ ತನ್ನ ಜೀವನವನ್ನೇ ನಾಶಪಡಿಸುತ್ತಿದ್ದಂಥ ಈ ದುಶ್ಚಟವನ್ನು ಬಿಟ್ಟು ಬಿಡುವುದು ಸುಲಭವಾಯಿತು. ಈಗ ಆತ ತನ್ನ ಸುಖಿ ಭವಿಷ್ಯದತ್ತ ಎದುರು ನೋಡುತ್ತಿದ್ದಾನೆ.

ಇಂಥ ದುಶ್ಚಟಗಳ ಪ್ರಕರಣಗಳು ಒಂದರ ಮೇಲೊಂದರಂತೆ ಕ್ಲಿನಿಕ್‌ಗೆ ಬಂದವು. ಚಿಕಿತ್ಸೆಯ ನಂತರ ಇದೇ ಬಗೆಯ ಸುಧಾರಣೆಗಳು ಕಂಡು ಬಂದವು. ಇದು ಸಂಮೋಹಿನಿ ತಂತ್ರದ ಮಹತ್ವವನ್ನು ಹೆಚ್ಚಿಸಿತು. ಮೇಲೆ ಹೇಳಿದ ಎಲ್ಲ ಪ್ರಕರಣಗಳು ಕ್ಲಿನಿಕಲ್ ವರದಿಯೇ ಹೊರತು ನಿಯಂತ್ರಿತ ಸಂಶೋಧನೆಯ ಅಧ್ಯಯನವಲ್ಲ ಎಂಬುದನ್ನು ವಾಚಕರಿಗೆ ಸ್ಪಷ್ಟಪಡಿಸಬಯಸುತ್ತೇನೆ. ಅಂತೆಯೇ ಧೂಮಪಾನಿಗಳು ಮತ್ತು ಮದ್ಯವ್ಯಸನಿಗಳು ಈ ದುಶ್ಚಟಗಳನ್ನು ನಿಲ್ಲಿಸಲು ಯಾವ ಅಂಶಗಳು ನೆರವಾದುವು ಎಂದು ಯಾರಾದರೂ ಅಚ್ಚರಿ ವ್ಯಕ್ತಪಡಿಸಬಹುದು. ಏಕೆಂದರೆ ಈ ವಿಧಾನವು ಸಂಮೋಹಿನಿ, ಪ್ರೇರೇಪಣೆ ಮತ್ತು ನಡವಳಿಕೆಯ ಪರಿವರ್ತನ ಇವುಗಳ ಸಂಯೋಜಿತ ತಂತ್ರ. ಇದರ

(ಪುಟ 16ಕ್ಕೆ)